# ಕರ್ನಾಟಕದಲ್ಲಿ ಸ್ವಾಮಿ ವಿವೇಕಾನಂದರು

**ಜಿ.ವಿ. ಹೆಗಡೆ**

ಸ್ವಾಮಿ ವಿವೇಕಾನಂದರ ಪಾದಸ್ಪರ್ಶದಿಂದ ಪುನೀತಗೊಂಡ ಕರ್ನಾಟಕದಲ್ಲಿ ರಾಮಕೃಷ್ಣ ಭಾವಧಾರೆ ಎಲ್ಲೆಡೆ ವ್ಯಾಪಿಸಿದ ಬಗೆ ಅತ್ಯಂತ ರೋಚಕವಾದುದು. ಇಲ್ಲಿ ಅವರ ಪರಿವ್ರಾಜಕ ದಿನಗಳ ಮಹತ್ವವನ್ನು ಕುರಿತು ಬರೆದಿರುವ ಲೇಖಕರು ಮೈಸೂರು ಆಶ್ರಮದ ಭಕ್ತರು. ಕೆನರಾ ಬ್ಯಾಂಕಿನ ನಿವೃತ್ತ ಅಧಿಕಾರಿಗಳಾಗಿದ್ದ ಅವರು ಈ ಪತ್ರಿಕೆಯಲ್ಲಿ ಹಲವು ಲೇಖನಗಳನ್ನು ಬರೆದಿದ್ದಾರೆ.

ವಿಶ್ವಗುರುವಾಗಿ ಮೆರೆದ ಭರತ ಭೂಮಿ, ಶತಮಾನಗಳ ಕಾಲ ಪರಕೀಯರ ತುಳಿತಕ್ಕೊಳಗಾಗಿ ತನ್ನ ಅಸ್ಮಿತೆಯನ್ನೇ ಮರೆತು, ತೀವ್ರ ಅಧಃಪತನದತ್ತ ಸಾಗುತ್ತಿದ್ದ ಸಮಯವದು. ಸಾಂಸ್ಕೃತಿಕವಾಗಿ, ಆರ್ಥಿಕವಾಗಿ ಜರ್ಜರಿತ ಭಾರತೀಯ ಸಮಾಜದ ಆಗಿನ ದುರವಸ್ಥೆ ಹೇಗಿತ್ತೆಂದರೆ, ಸ್ವಾಮಿ ವಿವೇಕಾನಂದರೇ ಹೇಳುವಂತೆ ಓರ್ವ ಮಹಾಪುರುಷನ ಆಗಮನ ಆಗ ಅನಿವಾರ್ಯವಾಗಿತ್ತು, ಆವಶ್ಯಕವಾಗಿತ್ತು. ಈ ಸಂಧಿಕಾಲದಲ್ಲಿ ಸರ್ವಧರ್ಮ ಸಮನ್ವಯಾಚಾರ್ಯರಾದ ಭಗವಾನ್ ಶ್ರೀ ರಾಮಕೃಷ್ಣರು ಅವತರಿಸಿದರು. ತೀವ್ರ ವಾದ ಸಾಧನೆಗಳ ಮೂಲಕ ವಿವಿಧ ಆಧ್ಯಾತ್ಮಿಕ ಅನುಭವಗಳನ್ನು ಪಡೆದರು. ಭಾರತಕ್ಕೆ ಮಾತ್ರವಲ್ಲದೆ, ಸಮಸ್ತ ವಿಶ್ವಕ್ಕೆ ಮಾರ್ಗದರ್ಶನ ನೀಡಬಲ್ಲ ಯೋಗ್ಯ ತ್ಯಾಗೀ ಶಿಷ್ಯರ ತಂಡವೊಂದನ್ನು ನಿರ್ಮಿಸಿದರು. ತಮ್ಮ ಅವತಾರ ಸಮಾಪ್ತಿಯ ಮುನ್ನ ತಮ್ಮ ಅತ್ಯಂತ ಪ್ರಿಯ ಶಿಷ್ಯ ಸ್ವಾಮಿ ವಿವೇಕಾನಂದರಿಗೆ ತಮ್ಮ ಆಧ್ಯಾತ್ಮಿಕ ಸಾಧನೆಗಳ ಫಲವನ್ನೆಲ್ಲಾ ಧಾರೆಯೆರೆದು, ಭಾರತ ದೇಶದ, ಹಾಗೂ ಸನಾತನ ಧರ್ಮದ ಪುನರುತ್ಥಾನದ ಪವಿತ್ರ ಕಾರ್ಯಕ್ಕೆ ನಿಯೋಜಿಸಿದರು. ಕೇವಲ ತನ್ನ ಆತ್ಮೋನ್ನತಿಗೆ ಮಾತ್ರವಲ್ಲ, ಸಹಸ್ರಾರು ಜನರಿಗೆ ಆಶ್ರಯ ನೀಡುವ ವಟವೃಕ್ಷವಾಗಿ ವಿವೇಕಾನಂದರು ಬೆಳೆಯಬೇಕು, ಸಮಸ್ತ ವಿಶ್ವಕ್ಕೆ ಸನಾತನ ಧರ್ಮದ ಆದರ್ಶಗಳನ್ನು ಸಾರಬೇಕು ಎನ್ನುವುದು ಅವರ ಆಶಯವಾಗಿತ್ತು.



## ಭಾರತ ಪರ್ಯಟನ

ಭಗವಾನ್ ಶ್ರೀರಾಮಕೃಷ್ಣರ ಮಹಾಸಮಾಧಿಯ ನಂತರ ಅವರ ಶಿಷ್ಯರು ಸ್ವಾಮಿ ವಿವೇಕಾನಂದರ ನಾಯಕತ್ವದಲ್ಲಿ **‘ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ’** ಎಂಬ ಆದರ್ಶದೊಡನೆ ಭಗವಾನ್ ರಾಮಕೃಷ್ಣರ ಹೆಸರಿನಲ್ಲಿ ರಾಮಕೃಷ್ಣ ಮಠವನ್ನು ಪ್ರಾರಂಭಿಸಿದರು. ಪ್ರಾರಂಭದ ದಿನಗಳು ತುಂಬಾ ಕಷ್ಟಕರವಾಗಿದ್ದವು. ಊಟ, ಬಟ್ಟೆಗಳಿಗೂ ಕೊರತೆಯಿದ್ದ ಅತ್ಯಂತ ಕಠಿಣ ಪರಿಸ್ಥಿತಿಗಳಲ್ಲೂ , ಸೋದರ ಸಂನ್ಯಾಸಿಗಳನ್ನು ಸಂಘಟನೆಯಲ್ಲೇ ಉಳಿಸಿಕೊಂಡು, ತೀವ್ರ ಆಧ್ಯಾತ್ಮಿಕ ಸಾಧನೆ, ಹಾಗೂ ಗುರುದೇವರ ವಿಚಾರಗಳ ಪ್ರಸಾರ ಕಾರ್ಯಕ್ಕೆ ಮಾರ್ಗದರ್ಶನ ನೀಡುವ ಹೊಣೆಯನ್ನು ಸ್ವಾಮಿ ವಿವೇಕಾನಂದರು ಅತ್ಯಂತ ಪ್ರೇಮದಿಂದ ನಿಭಾಯಿಸಿದರು. ಹೀಗೆ ಐದು – ಆರು ವರ್ಷಗಳೇ ಕಳೆದವು.

ದೇಶದ ಸಮಸ್ತ ಜನತೆಯನ್ನು ಜಾಗೃತಗೊಳಿಸಿ ದಿವ್ಯತೆಯತ್ತ ಮುನ್ನಡೆಸಬೇಕೆಂಬ ಗುರುದೇವರ ಆಶಯದಂತೆ ತಮ್ಮಿಂದ ಮುಂದೆ ಆಗಬೇಕಾದ ಮಹಾನ್ ಕಾರ್ಯಗಳಿಗೆ ಪೂರ್ವಭಾವಿಯಾಗಿ, ಸಮಗ್ರ ಭಾರತವನ್ನೊಮ್ಮೆ ಸುತ್ತಿ ಬರುವ ಅಗತ್ಯವನ್ನು ಮನಗಂಡ ಸ್ವಾಮೀಜಿ, ಪರಿವ್ರಾಜಕ ಸಂನ್ಯಾಸಿಯಾಗಿ ೧೮೯೨ರಲ್ಲಿ ಭಾರತ ಯಾತ್ರೆಯನ್ನು ಪ್ರಾರಂಭಿಸಿದರು.

ವಿಶ್ವಾದ್ಯಂತ ಉಪನಿಷತ್ತಿನ ವಾಣಿ ಮತ್ತೆ ಮೊಳಗಬೇಕು, ಹಿಂದೂ ಸಮಾಜವು ಕಳೆದುಕೊಂಡ ಗರಿಮೆಯನ್ನು ಮತ್ತೆ ಗಳಿಸಬೇಕು, ದುರ್ದೆಸೆಯಲ್ಲಿರುವ ಭಾರತೀಯ ಸೋದರರನ್ನು ಮೇಲೆತ್ತಬೇಕು – ಇದು ಅವರ ಉದ್ದೇಶ. ಆದರೆ ಇದನ್ನು ಕಾರ್ಯಗತಗೊಳಿಸುವುದು ಹೇಗೆ, ಏನು ಎಂಬ ಸ್ಪಷ್ಟತೆ ಅವರಿಗಿನ್ನೂ ಮೂಡಿರಲಿಲ್ಲ. ಪರಿವ್ರಜನದ ದಿನಗಳಲ್ಲಿ ಅವರ ಮನಸ್ಸಿನಲ್ಲಿ ಉದ್ದೇಶ ಸಾಧನೆಗೆ ಸೂಕ್ತ ಯೋಜನೆಗಳ ರೂಪುರೇಷೆಗಳು ಸ್ಪಷ್ಟವಾಗತೊಡಗಿದವು.

ಆಗ ಸ್ವಾಮೀಜಿಯವರು ಕೇವಲ ಒಬ್ಬ ಸಾಮಾನ್ಯ, ಅನಾಮಿಕ ಸಂನ್ಯಾಸಿ. ಯಾರಿಗೂ ಅವರ ಗುರುತು, ಪರಿಚಯವಿರಲಿಲ್ಲ. ಭಗ

ವಾನ್ ರಾಮಕೃಷ್ಣರ ಬಗ್ಗೆಯೂ ಕೂಡ ಜನ ಸಾಮಾನ್ಯರಿಗೆ ತಿಳಿದಿರ ಲಿಲ್ಲ. ಉಡಲು ಒಂದೆರಡು ಬಟ್ಟೆಗಳು, ಒಂದೆರಡು ಪುಸ್ತಕಗಳು, ಒಂದು ಕಮಂಡಲ, ಕೈಯಲ್ಲೊಂದು ದೊಣ್ಣೆಯಂತಹ ದಂಡ. ಇಷ್ಟು ಮಾತ್ರ ಸ್ವಾಮೀಜಿಯವರ ಬಳಿ ಇದ್ದ ವಸ್ತುಗಳು. ಅವರು ಹಣವನ್ನು ಮುಟ್ಟುತ್ತಿರಲಿಲ್ಲ. ರಾತ್ರಿ ಕಳೆಯಲು ಧರ್ಮಛತ್ರ, ಅಥವಾ ಪಾಳು ಗುಡಿಯಾದರೂ ಸರಿ. ಭಿಕ್ಷೆಯಲ್ಲಿ ಏನು ಸಿಕ್ಕಿತೋ ಅದೇ ಆಹಾರ. ಕೆಲವೊಮ್ಮೆ ಭಿಕ್ಷೆ ಸಿಗದಿದ್ದ ದಿನಗಳೂ ಇರುತಿದ್ದವು. ಆದರೆ ಅವರು ಎಂದೂ ತಾವೇ ಹಾಕಿಕೊಂಡಿದ್ದ ಪರಿವ್ರಾಜಕ ಧರ್ಮದ ನಿಯಮಗಳನ್ನು ಮೀರುತ್ತಿರಲಿಲ್ಲ.

ತಮ್ಮ ಭಾರತ ಭ್ರಮಣದ ಸಮಯದಲ್ಲಿ ಸ್ವಾಮೀಜಿಯವರು ಎಲ್ಲ ವರ್ಗದ ಜನರೊಡನೆ ಬೆರೆತು ಅವರ ಸ್ಥಿತಿಗತಿಗಳನ್ನು ಅರಿಯು ತಿದ್ದರು. ಅವರ ಸಂಪರ್ಕಕ್ಕೆ ಬಂದ ಅನೇಕ ರಾಜ, ಮಹಾರಾಜರು, ಉನ್ನತ ಅಧಿಕಾರಿಗಳು, ಪ್ರಭಾವಿ ವ್ಯಕ್ತಿಗಳು ಅವರ ಉನ್ನತ ವಿಚಾರ ಗಳಿಗೆ, ಮಧುರ ಮಾತುಗಳಿಗೆ, ಪ್ರಭಾವಿ ವ್ಯಕ್ತಿತ್ವಕ್ಕೆ ಮಾರುಹೋಗಿ ಅವರ ಬೆಂಬಲಿಗರಾದರು. ಅಂತಹವರಿಗೆ ಸ್ವಾಮೀಜಿ ಯೋಗ್ಯ ಮಾರ್ಗದರ್ಶನ ನೀಡಿದರು. ಶ್ರೀರಾಮಕೃಷ್ಣರು ಬೋಧಿಸಿದ ಧರ್ಮದ ಉನ್ನತ ಆದರ್ಶಗಳನ್ನು ತಿಳಿಸಿಕೊಡುವುದರೊಂದಿಗೆ, ಸಮಾಜವನ್ನು ಕಾಡುವ ಸಮಸ್ಯೆಗಳನ್ನು ಮನವರಿಕೆ ಮಾಡಿಸಿ, ಸಾಧ್ಯವಿದ್ದ ಸುಧಾರಣೆಗಳನ್ನು ಮಾಡಲು ಪ್ರೇರೇಪಿಸುವುದು ಅವರ ಉದ್ದೇಶವಾಗಿತ್ತು.

ಕಲ್ಕತ್ತಾದಿಂದ ಹೊರಟ ಸ್ವಾಮೀಜಿ, ಉತ್ತರದ ಹಿಮಾಲಯ ದಿಂದ ಬೇರೆ ಬೇರೆ ರಾಜ್ಯಗಳ ಮೂಲಕ ದಕ್ಷಿಣದ ಕನ್ಯಾಕುಮಾರಿಗೆ ಸಾಗುವಾಗ ೧೮೯೨ನೇ ಇಸವಿ, ಅಕ್ಟೋಬರ್ ತಿಂಗಳಿನಲ್ಲಿ ಕರ್ನಾ ಟಕದ ಬೆಳಗಾವಿಯನ್ನು ತಲುಪಿದರು.

ಕೊಲ್ಹಾಪುರದ ರಾಜರ ಆಪ್ತ ಕಾರ್ಯದರ್ಶಿ, ಲಕ್ಷ್ಮಣರಾವ್ ಗೋಳ್ವಲ್ಕರ್‌ರವರು ಬೆಳಗಾವಿಯ ತಮ್ಮ ಸ್ನೇಹಿತ, ಖ್ಯಾತ ವಕೀಲ ಸದಾಶಿವ ಬಾಲಕೃಷ್ಣ ಭಾಟೆಯವರಿಗೆ ನೀಡಿದ ಪರಿಚಯ ಪತ್ರ ದೊಂದಿಗೆ ಸ್ವಾಮೀಜಿಯವರು ೧೬.೧೦.೧೮೯೨ರ ಮುಂಜಾನೆ ಭಾಟೆಯವರ ನಿವಾಸ ಭಾಟೆ ವಾಡಾ ತಲುಪಿದರು.

### ಬೆಳಗಾವಿಯ ಭಾಟೆಯವರಲ್ಲಿ

ಸ್ವಾಮೀಜಿಯವರನ್ನು ಸ್ವಾಗತಿಸಿದ ಮನೆಯವರು ಅವರ ವೇಷಭೂಷಣ, ನಡೆನುಡಿ ನೋಡಿ ಅಚ್ಚರಿಗೊಂಡರು. ಕಾವಿ ವಸ್ತ್ರ ಧರಿಸಿದ್ದರೂ ಅವರ ಉಡುಪು ಇತರ ಸಂನ್ಯಾಸಿಗಳಿಗಿಂತ ತುಂಬಾ ಭಿನ್ನವಾಗಿತ್ತು. ಆಂಗ್ಲ ಭಾಷೆಯಲ್ಲಿ ನಿರರ್ಗಳವಾಗಿ ಮಾತನಾಡ ಬಲ್ಲವರಾಗಿದ್ದರು. ಪ್ರಚಂಡ ಬುದ್ಧಿಶಕ್ತಿಯ, ಅನೇಕ ವಿಷಯ ಸಂಗ್ರಹವಿದ್ದ ಇಂತಹ ಸಂನ್ಯಾಸಿಗಳನ್ನು ಅವರು ಎಂದೂ ನೋಡಿರ ಲಿಲ್ಲ. ಅವರೊಬ್ಬ ಅದ್ಭುತ ವ್ಯಕ್ತಿ ಎಂಬುದನ್ನು ತಿಳಿಯಲು ಬಹಳ ಸಮಯ ಬೇಕಾಗಲಿಲ್ಲ. ಅವರ ಯೋಗ್ಯತೆ, ಅಸಾಧಾರಣ ವ್ಯಕ್ತಿತ್ವಕ್ಕೆ ಸಂಪೂರ್ಣ ಮಾರುಹೋದರು.

ಸದಾಶಿವ ಭಾಟೆಯವರು ಬೆಳಗಾವಿಯ ಒಬ್ಬ ಗೌರವಾನ್ವಿತ, ಗಣ್ಯ ವ್ಯಕ್ತಿ. ಬರೋಡಾದ ಮಹಾರಾಜ ಸಯ್ಯಾಜಿರಾವ್ ಗಾಯ ಕ್ವಾಡ್, ಲೋಕಮಾನ್ಯ ತಿಲಕ್ ಮುಂತಾದ ಗಣ್ಯರೊಡನೆ ಅವರ ಒಡನಾಟವಿತ್ತು. ಸ್ವಾಮೀಜಿಯವರ ಪಾಂಡಿತ್ಯ, ವಿಚಾರಧಾರೆ ಯಿಂದ ಪ್ರಭಾವಿತರಾದ ಅವರು ತಮ್ಮ ಸ್ನೇಹಿತರನ್ನು, ಊರಿನ ಪ್ರತಿಷ್ಠಿತ ವ್ಯಕ್ತಿಗಳನ್ನು, ಮುಂದಾಳುಗಳನ್ನು ಸ್ವಾಮೀಜಿಯವರಿಗೆ ಪರಿಚಯಿಸಲು ಉತ್ಸುಕರಾದರು. ಅವರ ಆಹ್ವಾನದಿಂದ ದಿನವೂ ಹಲವಾರು ಗಣ್ಯ ವ್ಯಕ್ತಿಗಳು ಸ್ವಾಮೀಜಿಯವರೊಡನೆ ವಿಚಾರ ವಿನಿಮಯಕ್ಕೆ ಬರತೊಡಗಿದರು. ಸಮಾಜದಲ್ಲಿ ಸ್ವಾಮೀಜಿಯವರ ಸಂದೇಶಗಳು ಪ್ರಚಾರ ಪಡೆದವು. ಬಹಳ ಬೇಗ ಅನೇಕ ಜನರು ಅವರ ವ್ಯಕ್ತಿತ್ವವನ್ನು ಮೆಚ್ಚಿ ಬೆಂಬಲಿಗರಾಗಿ ಬದಲಾದರು.

ಸದಾಶಿವ ಭಾಟೆಯವರ ಮಗ ಗಣೇಶ ಭಾಟೆ ಆಗ ೧೨ ವರ್ಷದ ಬಾಲಕ. (ಮುಂದೆ ಗುಜರಾತ್ ರಾಜ್ಯದಲ್ಲಿ ಉನ್ನತ ಹುದ್ದೆ ಯನ್ನು ಹೊಂದಿದ್ದರು. ನಂತರ ಪಾಟ್ನಾ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾ ಪಕರೂ ಆಗಿದ್ದರು). ಸ್ವಾಮೀಜಿಯವರನ್ನು ಕುರಿತಾದ ಅವರ ವಿವರ ವಾದ ಅನುಭವಗಳನ್ನು ಅವರ ಸ್ಮೃತಿಲೇಖನ ಒಂದರಿಂದ ತಿಳಿದು ಕೊಳ್ಳಬಹುದು. *(Reminiscences of Swami Viveka nanda, ಕನ್ನಡದಲ್ಲಿ 'ಸ್ವಾಮಿ ವಿವೇಕಾನಂದರ ದಿವ್ಯಸ್ಮೃತಿ')*



ಬೆಳಗಾವಿಯಲ್ಲಿ ಸ್ವಾಮೀಜಿ

ಸಂಕ್ಷಿಪ್ತವಾಗಿ ಅವರ ಅನಿಸಿಕೆಗಳು ಹೀಗಿವೆ:

''ಸ್ವಾಮೀಜಿಯವರದು ತುಂಬಾ ಆಕರ್ಷಕ ರೂಪ. ಸಂಸ್ಕೃತ ದಲ್ಲಿ ಪ್ರಕಾಂಡ ಪಂಡಿತರು. ಇಂಗ್ಲಿಷ್, ಹಿಂದಿ ಭಾಷೆಗಳನ್ನು ಚೆನ್ನಾಗಿ ಬಲ್ಲವರಾಗಿದ್ದರು.

''ತಂದೆಯವರು ತಮ್ಮ ಸ್ನೇಹಿತರಿಗೆ ಸ್ವಾಮೀಜಿಯವರನ್ನು ಪರಿಚಯಿಸಿದಂತೆ, ದಿನವೂ ನಮ್ಮ ಮನೆಯಲ್ಲಿ ದೊಡ್ಡ ಸಭೆಯೇ ಸೇರತೊಡಗಿತು. ವಿಚಾರ ವಿನಿಮಯ ನಡೆಯತೊಡಗಿತು. ಸ್ವಾಮೀಜಿ ಯವರು ಯಾವ ಬಿಸಿ ಬಿಸಿ ಚರ್ಚೆಯ ಸಮಯದಲ್ಲೂ ಹಾಸ್ಯ ಪ್ರವೃತ್ತಿಯನ್ನು ಬಿಡುತ್ತಿರಲಿಲ್ಲ. ಮೊಂಡು ವಾದಗಳನ್ನು ಕೆಲವೊಮ್ಮೆ ಕಟುನುಡಿಗಳಿಂದ ಖಂಡಿಸಿದರೂ ಅದರಲ್ಲಿ ನಂಜು ಇರುತ್ತಿರಲಿಲ್ಲ. ವಿರೋಧಿಯ ಬಾಯಿ ಮುಚ್ಚಿಸುವುದಕ್ಕಿಂತ ನಮ್ಮ ಅಭಿಪ್ರಾಯ ದಲ್ಲಿ ನಂಬಿಕೆ ಉಂಟುಮಾಡುವುದೇ ಗುರಿಯಾಗಬೇಕು ಎನ್ನು ತ್ತಿದ್ದರು.

''ಇಂದ್ರಿಯಾತೀತವಾದ ಆಧ್ಯಾತ್ಮಿಕ ಸತ್ಯದ ಸಾಕ್ಷಾತ್ಕಾರವೇ ಜೀವನದ ಗುರಿ. ಅದನ್ನು ಸಾಧಿಸಲು ಸಹಾಯಕವಾಗುವ ಧರ್ಮ ವೇ ನಿಜವಾದ ಧರ್ಮ. ಯಾವುದೇ ರೀತಿಯಿಂದಲಾದರೂ ಗುರಿ ಸೇರಲು ಪ್ರಯತ್ನಿಸಬೇಕು. ಬರಿಯ ಶಾಸ್ತ್ರಜ್ಞಾನದಿಂದ ಆಧ್ಯಾತ್ಮಿಕ ಲಾಭವೇನೂ ಆಗದು ಎಂಬ ಸತ್ಯವನ್ನು ಸರಳವಾಗಿ ಸಾರಿದರು.

''ದೀನ ದಲಿತರಲ್ಲಿ, ರೋಗಿಗಳಲ್ಲಿ, ಹಸಿವಿನಿಂದ ಬಳಲುತ್ತಿರು ವವರಲ್ಲಿ ನಾರಾಯಣನನ್ನು ಕಂಡು ಅವರ ಸೇವೆ ಮಾಡುವುದೇ ಶ್ರೇಷ್ಠವಾದ ಪೂಜೆ. ಅದರಿಂದಲೂ ಆಧ್ಯಾತ್ಮಿಕ ಉನ್ನತಿಯನ್ನು ಸಾಧಿಸಬಹುದು. ಇದು ಅತ್ಯಂತ ಸುಲಭ ಸಾಧನಮಾರ್ಗ ಎಂಬುದು ಅವರ ಖಚಿತ ಅಭಿಪ್ರಾಯ.

''ಭಾರತದ ಪುನರುತ್ಥಾನಕ್ಕಾಗಿ ಸ್ವಾಮೀಜಿಯವರಿಗೆ ಇದ್ದ ಕಳಕಳಿ ಅನನ್ಯ. ದೀನ ಸ್ಥಿತಿಯಲ್ಲಿರುವ ದೇಶಬಾಂಧವರ ಉದ್ಧಾರ ಕ್ಕಾಗಿ ಅವರ ಹೃದಯ ಮಮ್ಮಲ ಮರುಗುತಿತ್ತು. ವೇದಾಂತವು ಇತರ ಮತಗಳಿಗೆ ಸ್ಪರ್ಧಿಯಲ್ಲ. ಅದು ಜೀವನದಾನ ಮಾಡುವ ಶಾಶ್ವತ ಸ್ಫೂರ್ತಿಯ ನೆಲೆ! ಈ ದೇಶ ಮತ್ತು ಪ್ರಪಂಚದ ಜನತೆಗೆ ವೇದಾಂತದ ಅಮೂಲ್ಯ ಸತ್ಯಗಳನ್ನು ಬೋಧಿಸುವ ಕಾಲ ಈಗ ಸನ್ನಿಹಿತವಾಗಿದೆ ಎಂದು ಅವರು ಹೇಳುತ್ತಿದ್ದರು.''

### ಪರಮ ಶಿಷ್ಯ – ಹರಿಪದ ಮಿತ್ರ

ಒಂದು ದಿನ (೧೮.೧೦.೧೮೯೨) ಸಂಜೆ ವೇಳೆಯಲ್ಲಿ ಸದಾ ಶಿವ ಭಾಟೆಯವರು ಸ್ವಾಮೀಜಿಯವರೊಂದಿಗೆ ತನ್ನ ಸ್ನೇಹಿತ, ಅರಣ್ಯಾಧಿಕಾರಿ ಹರಿಪದ ಮಿತ್ರನ ಮನೆಗೆ ಆಗಮಿಸಿದರು. ಅವ ರನ್ನು ಹರಿಪದನಿಗೆ ಪರಿಚಯ ಮಾಡಿಸಿದರು. ಅವರಿಗೆ ನಮಸ್ಕರಿ ಸಿದ ಹರಿಪದ ಮಿತ್ರ ಅವರನ್ನೇ ನೋಡುತ್ತ ನಿಂತ. ಪ್ರಸನ್ನ ವದನ, ಮಿಂಚುವ ಕಣ್ಣುಗಳು, ಗೈರಿಕ ವಸನ, ಕಾಲಿನಲ್ಲಿ ಸಾಮಾನ್ಯ ಕೊಲ್ಹಾಪುರಿ ಪಾದರಕ್ಷೆ, ಕಾವಿಯ ಪೇಟ. ಮನಸ್ಸಿನಲ್ಲಿ ಅಚ್ಚಳಿ ಯದೆ ಉಳಿಯುವ ಮೋಹಕ ಆಕೃತಿ. ಸ್ವಾಮೀಜಿಯವರ ಭವ್ಯ ವ್ಯಕ್ತಿತ್ವದ ಆಕರ್ಷಣೆ ಅವನನ್ನು ಬೆರಗಾಗಿಸಿತು.

ಹರಿಪದ ಮಿತ್ರ ಬೆಳಗಾವಿಯ ಉಪ ವಿಭಾಗ ಅರಣ್ಯಾಕಾರಿ. ಮೊದಲು ಒಬ್ಬ ನಾಸ್ತಿಕನೇ ಆಗಿದ್ದ. ಧರ್ಮದ ಬಗ್ಗೆ ಸರಿಯಾದ ಮಾರ್ಗದರ್ಶನದ ಕೊರತೆ ಅವನನ್ನು ಕಾಡುತಿತ್ತು. ಚರ್ಚುಗಳಿಗೂ, ದೇವಾಲಯಗಳಿಗೂ ಹೋಗುತ್ತಿದ್ದ. ಆದರೆ ನೆಮ್ಮದಿಯಿರಲಿಲ್ಲ. ಸಂನ್ಯಾಸಿಗಳ ಕುರಿತು ಅವನಿಗೆ ಉತ್ತಮ ಅಭಿಪ್ರಾಯವೇನೂ ಇರ ಲಿಲ್ಲ. ಎಲ್ಲರೂ ಮೋಸಗಾರರೇ ಎಂದವನ ಭಾವನೆ! ಇವರೂ ಕೂಡ ಯಾವುದೋ ಪ್ರಯೋಜನ ಪಡೆಯಲು ಬಂದಿದ್ದಾರೆ. ಬಹುಶಃ ಮರಾಠಿಗರ ಮನೆ ಒಗ್ಗಿಲ್ಲ, ಅದಕ್ಕೆ ಬಂಗಾಳಿಯನ್ನು ಹುಡುಕಿ ಬಂದಿ ದ್ದಾರೆ ಎಂದು ಭಾವಿಸಿದ. ಶಿಷ್ಟಾಚಾರಕ್ಕಾಗಿ ಅವರನ್ನು ಸ್ವಾಗತಿಸಿದ. ಆದರೆ ಅವರೊಂದಿಗೆ ಸ್ವಲ್ಪ ಸಮಯ ಮಾತನಾಡುವಷ್ಟರಲ್ಲಿ ಅವನ ಅಭಿಪ್ರಾಯ ಬದಲಾಯಿತು. ಅವರ ಬಗ್ಗೆ ಗೌರವ ಮೂಡಿತು. ಅವರನ್ನು ಮನೆಯಲ್ಲಿ ಉಳಿಸಿಕೊಳ್ಳಬೇಕೆನಿಸಿತು. ಹಾಗೆಯೇ ಅವ ರನ್ನು ವಿನಂತಿಸಿದ. ಆದರೆ ಸ್ವಾಮೀಜಿ ಒಪ್ಪಲಿಲ್ಲ. ''ಭಾಟೆಯವರ ಮನೆಯವರು ನನ್ನನ್ನು ತುಂಬಾ ಆದರದಿಂದ ನೋಡಿಕೊಳ್ಳು ತ್ತಿದ್ದಾರೆ. ಅಲ್ಲಿ ನನಗೇನೂ ಅನಾನುಕೂಲವಿಲ್ಲ. ಈಗ ಬಂಗಾಳಿ ಯೊಬ್ಬ ಸಿಕ್ಕಿದನೆಂದು ನಾನು ಅಲ್ಲಿಂದ ಹೊರಟು ಬಂದರೆ ಅವರೇ ನೆಂದುಕೊಂಡಾರು? ಒಂದು ವೇಳೆ ಅವರೇ ಒಪ್ಪಿ ಕಳಿಸಿಕೊಟ್ಟರೆ, ಬರಲು ನನ್ನದೇನೂ ಅಭ್ಯಂತರವಿಲ್ಲ'' ಎಂದರು. ಸ್ವಾಮೀಜಿಯವರ ಅಭಿಪ್ರಾಯ ಅವನಿಗೆ ಸರಿಯೆನಿಸಿತು. ಮರುದಿನ ಉಪಹಾರ ಕ್ಕಾದರೂ ತನ್ನ ಮನೆಗೆ ಬರುವಂತೆ ಆಹ್ವಾನಿಸಿದ. ಸ್ವಾಮೀಜಿ ಒಪ್ಪಿ ಭಾಟೆಯವರ ಜೊತೆ ಮರಳಿದರು.

ಹರಿಪದನ ಮೇಲೆ ಸ್ವಾಮೀಜಿಯವರ ಮಾತುಗಳು ಆಳವಾದ ಪ್ರಭಾವ ಬೀರಿದ್ದವು. ಸ್ವಾರ್ಥ ಲವಲೇಶವೂ ಇಲ್ಲದ ಇಂತಹ ಸಾಧುಗಳು ಇರಲು ಸಾಧ್ಯವೇ ಎಂದು ಅವನು ಯೋಚಿಸುತ್ತಿದ್ದ. ಅವರನ್ನು ಮತ್ತೆ ಯಾವಾಗ ಕಂಡೇನೋ ಎಂದು ಚಡಪಡಿಸುತ್ತಿದ್ದ. ಮರುದಿನ ಬೆಳಗಿನಿಂದಲೇ ಅವರಿಗಾಗಿ ಕಾಯುತ್ತಿದ್ದ. ಗಂಟೆ ಎಂಟಾದರೂ ಸ್ವಾಮೀಜಿಯವರ ಸುಳಿವಿಲ್ಲ! ತಾನೇ ವಕೀಲರಲ್ಲಿಗೆ ಧಾವಿಸಿದ. ಅಲ್ಲಿನ ದೃಶ್ಯ ಅವನನ್ನು ಬೆರಗಾಗಿಸಿತು. ಸ್ವಾಮೀಜಿ ಯವರ ಸುತ್ತ ಅನೇಕ ಪಂಡಿತರು, ವಕೀಲರು, ಗಣ್ಯ ವ್ಯಕ್ತಿಗಳು ಕುಳಿತು ಬೇರೆ ಬೇರೆ ವಿಷಯಗಳ ಕುರಿತು ಪ್ರಶ್ನೆ ಕೇಳುತ್ತಿದ್ದಾರೆ. ಸ್ವಾಮೀಜಿ ಇಂಗ್ಲಿಷಿನಲ್ಲಿ, ಕೆಲವೊಮ್ಮೆ ಸಂಸ್ಕೃತ ಅಥವಾ ಹಿಂದಿ ಯಲ್ಲಿ ಉತ್ತರಿಸುತ್ತಿದ್ದಾರೆ. ಗಂಭೀರ ವಿಷಯಗಳನ್ನು ಅತ್ಯಂತ ಸರಳ ಭಾಷೆಯಲ್ಲಿ ವಿವರಿಸುತ್ತಿದ್ದಾರೆ. ಕುಳಿತವರು ಮಂತ್ರ ಮುಗ್ಧ ರಾಗಿ, ಏಕಾಗ್ರತೆಯಿಂದ ಉತ್ತರಗಳನ್ನು ಆಲಿಸುತ್ತಿದ್ದಾರೆ. ಅವನಿ ಗನ್ನಿಸಿತು : ಇವರು ಮನುಷ್ಯರಲ್ಲ, ದೈವಾಂಶಸಂಭೂತರೇ ಇರ ಬೇಕು! ಅವನೂ ಆಸಕ್ತಿಯಿಂದ ಗಮನಿಸುತ್ತ ಕುಳಿತ.

ಸಾಕಷ್ಟು ಪ್ರಶ್ನೋತ್ತರಗಳ ನಂತರ, ಬಂದವರು ಸ್ವಾಮೀಜಿ ಯವರಿಗೆ ನಮಸ್ಕರಿಸಿ ತೆರಳತೊಡಗಿದರು. ಆಗ ಸ್ವಾಮೀಜಿ ಹರಿ ಪದನಿಗೆ ಹೇಳುತ್ತಾರೆ:

''ಇಷ್ಟು ಜನರನ್ನು ನಿರಾಶೆಗೊಳಿಸಿ ಬರಲು ಮನಸ್ಸಾಗಲಿಲ್ಲ. ನೀನು ಕ್ಷಮಿಸುತ್ತೀ ಎಂದು ಭಾವಿಸುತ್ತೇನೆ.''

ಹರಿಪದ ಸ್ವಾಮೀಜಿಯವರನ್ನು ತನ್ನಲ್ಲಿಗೆ ಬಂದು ಉಳಿಯುವಂತೆ ಒತ್ತಾಯದಿಂದ ಬೇಡಿಕೊಂಡ. ನಂತರ ಭಾಟೆಯವರನ್ನು ಕಷ್ಟಪಟ್ಟು ಒಪ್ಪಿಸಿ, ಸ್ವಾಮೀಜಿಯವರನ್ನು ತನ್ನ ಮನೆಗೆ ಕರೆದುಕೊಂಡು ಹೋದ.

ಸ್ವಾಮೀಜಿಯವರ ಸ್ನೇಹಮಯ ನಡವಳಿಕೆ, ಸರಳತೆಗಳಿಂದ ಹರಿಪದನ ಇಡೀ ಕುಟುಂಬಕ್ಕೆ ಮಾತ್ರವಲ್ಲ, ಮನೆಯ ಆಳುಕಾಳುಗಳಿಗೂ ಅವರ ಮೇಲೆ ಅಪಾರ ಪ್ರೀತಿ ಗೌರವಗಳು ಉಂಟಾದವು. ಅವರು ಎಲ್ಲರಿಗೂ ಆಪ್ತರಾದರು. ಹರಿಪದನಿಗೆ ಸ್ವಾಮೀಜಿಯವರನ್ನು ಇನ್ನಷ್ಟು ದಿನ ತಮ್ಮಲ್ಲೇ ಉಳಿಸಿಕೊಳ್ಳುವ ಬಯಕೆ. ಎಲ್ಲಿಯೂ ಮೂರು ದಿನ ಮೀರಿ ನಿಲ್ಲದ ಅವರು, ಹರಿಪದನ ಕುಟುಂಬದ ಪ್ರೀತಿಗೆ ಮಣಿದು ಬರೋಬ್ಬರಿ ಒಂಬತ್ತು ದಿನ ಅಲ್ಲೇ ತಂಗಿದರು. ಅವರು ಇಷ್ಟು ದೀರ್ಘಕಾಲ ಒಂದೇ ಕುಟುಂಬದೊಡನೆ ಕಳೆದಿದ್ದು ಒಂದು ಅಪರೂಪದ ಘಟನೆ! ಅವರ ಸಾನ್ನಿಧ್ಯದಲ್ಲಿ ಹರಿಪದನಿಗೆ ಎಲ್ಲಿಲ್ಲದ ಶಾಂತಿ, ನೆಮ್ಮದಿಯ ಅನುಭವವಾಯಿತು. ಅವನನ್ನು ಕಾಡುತ್ತಿದ್ದ ಸಂದೇಹಗಳೆಲ್ಲ ಅವರ ದರ್ಶನ ಮಾತ್ರದಿಂದ ಪಲಾಯನ ಮಾಡಿದವು. ಅವನು ವೈಯಕ್ತಿಕ ವ್ಯವಹಾರಗಳಲ್ಲೂ ಅವರ ಸಲಹೆ ಪಡೆಯತೊಡಗಿದ. ಹೀಗೆ ಅವನಲ್ಲಿ ಅಪೂರ್ವ ಬದಲಾವಣೆಯಾಯಿತು. ಸ್ವಾಮೀಜಿಯವರಿಗೆ ಸಂಪೂರ್ಣ ಶರಣಾದ.

ಆ ದಿನಗಳಲ್ಲಿ ಅವರಿಬ್ಬರ ನಡುವೆ ಮತ್ತು ಇತರ ವ್ಯಕ್ತಿಗಳೊಡನೆ ನಡೆದ ವಿಚಾರ ವಿನಿಮಯದ ವಿಸ್ತಾರವಾದ ವಿವರಗಳು ಹರಿಪದನಿಂದ ಲಭ್ಯವಾಗಿವೆ. *('ವಿಶ್ವಗುರು ಸ್ವಾಮಿ ವಿವೇಕಾನಂದ' – ಸ್ವಾಮಿ ವಿವೇಕಾನಂದರ ಸವಿನೆನಪುಗಳು : ಪು. ೧೫೧ – ೧೭೭)*

ಸ್ಮೃತಿಲೇಖನದಲ್ಲಿ ಈ ಕುರಿತು ಅವನು ಬರೆಯುತ್ತಾನೆ: ಸ್ವಾಮೀಜಿ ಪ್ರತಿದಿನ ಹೇಳುತ್ತಿದ್ದ ಅನೇಕ ಸ್ವಾರಸ್ಯಕರ ವಿಷಯಗಳನ್ನು ಸಂಗ್ರಹಿಸಿದ್ದರೆ ದೊಡ್ಡ ಪುಸ್ತಕವೇ ಆಗುತ್ತಿತ್ತು. ಒಂದೇ ಪ್ರಶ್ನೆಗೆ ಒಂದೇ ರೀತಿಯ ಉತ್ತರ ಕೊಡುವ ಮತ್ತು ಒಂದು ದೃಷ್ಟಾಂತವನ್ನು ಮತ್ತೆ ಮತ್ತೆ ಹೇಳುವ ಸ್ವಭಾವ ಅವರದಲ್ಲ. ಒಂದೇ ಪ್ರಶ್ನೆಗೆ ಇನ್ನೊಮ್ಮೆ ಉತ್ತರಿಸಬೇಕಾದ ಸಂದರ್ಭ ಬಂದಾಗ ಅವರು ಅದೇ ಉತ್ತರವನ್ನು ಪುನರುಚ್ಚರಿಸದೆ ಹೊಸ ಉಪಮಾನ-ರೂಪಕಗಳ ಮೂಲಕ ಬೇರೆ ರೀತಿಯಲ್ಲಿ ಉತ್ತರಿಸುತಿದ್ದರು. ಆಗ ಅವರು ಯಾವುದೋ ನೂತನ ವಿಷಯವನ್ನು ಹೇಳುತ್ತಿರುವಂತೆ ಅನ್ನಿಸುತ್ತಿತ್ತು. ಇದರ ಪರಿಣಾಮವಾಗಿ ಅವರ ಮಾತು ಎಂದೂ ಬೇಸರವಾಗುತ್ತಿರಲಿಲ್ಲ. ಅವರು ಮತ್ತೂ ಮತ್ತೂ ಆಸಕ್ತಿ ಕೆರಳಿಸಿ ಕೇಳುಗರನ್ನು ಮಂತ್ರಮುಗ್ಧರನ್ನಾಗಿಸುತ್ತಿದ್ದರು.

ಸ್ವಾಮೀಜಿಯವರು ವ್ಯಕ್ತಪಡಿಸಿದ ಅಭಿಪ್ರಾಯಗಳು ಅಲ್ಲಿದ್ದವರಿಗೆ ಮಾತ್ರ ಅನ್ವಯಿಸುವುದೆಂದು ಭಾವಿಸಬಾರದು. ಅವು ಸಮಸ್ತ ಮಾನವ ಕುಲಕ್ಕೇ ನೀಡಿದ ಅಮೂಲ್ಯ ಸಂದೇಶಗಳು. ಕೆಲವು ಆಯ್ದ ಸ್ವಾರಸ್ಯಕರ ವಿಚಾರಗಳ ಸಾರಾಂಶ ಹೀಗಿದೆ:

*ಯಾವ ಧರ್ಮ ಸತ್ಯ ? ದೇವರ ಸ್ವರೂಪವೇನು?*

ಎಲ್ಲ ಧರ್ಮಗಳೂ ಸತ್ಯ. ಏಕೆಂದರೆ ಎಲ್ಲ ಧರ್ಮಗಳೂ ಒಂದೇ ಸತ್ಯವನ್ನು ತನ್ನದೇ ಆದ ರೀತಿಯಲ್ಲಿ ಪ್ರತಿಬಿಂಬಿಸುತ್ತವೆ. ಇದು ಒಂದೇ ಸೂರ್ಯನ ಚಿತ್ರವನ್ನು ಬೇರೆ ಬೇರೆ ಕಡೆಗಳಿಂದ ತೆಗೆದಂತೆ.

*ನಂಬಿಕೆಯೇ ಎಲ್ಲ ಧರ್ಮಗಳ ತಳಹದಿ ತಾನೆ ?*

ಸ್ವಾಮೀಜಿಯ ಮುಗುಳ್ನಗೆಯ ಉತ್ತರ: ಒಬ್ಬನು ರಾಜನಾದರೆ ಎಲ್ಲಾ ಆಸೆಗಳನ್ನು ಪೂರೈಸಿಕೊಳ್ಳಬಹುದು. ಆದರೆ ರಾಜನಾಗುವುದು ಹೇಗೆಂಬುದೇ ಸಮಸ್ಯೆ. ಶ್ರದ್ಧೆಯನ್ನು ಹೊರಗಿನಿಂದ ತುಂಬಬಹುದೆ? ವೈಯಕ್ತಿಕ ಅನುಭವವಿಲ್ಲದೆ ಶ್ರದ್ಧೆ ಬಾರದು.

*ನಿಮ್ಮಂತಹ ಪ್ರಚಂಡ ಇಚ್ಛಾಶಕ್ತಿಯುಳ್ಳವರಿಗೆ ಇಷ್ಟೊಂದು ನಿಯಮ ಪಾಲನೆಯ ಅಗತ್ಯವಿದೆಯೆ ?*

ಮನಸ್ಸು ಎಲ್ಲೆಂದರಲ್ಲಿ ಎಳೆಯುತ್ತಾ ಇರುತ್ತದೆ. ಅದನ್ನು ಹತೋಟಿಯಲ್ಲಿಡಲು ಸಂನ್ಯಾಸಿಯೂ ನಿಯಮ ಪಾಲನೆ ಮಾಡಲೇಬೇಕು. ಯಾರಾದರೂ ಮನಸ್ಸಿನ ಮೇಲೆ ತಮ್ಮ ಹಿಡಿತವಿದೆಯೆಂದುಕೊಂಡರೆ ಅದು ಕೇವಲ ಭ್ರಮೆ. ಹೆಂಡತಿಯ ಮೇಲಿನ ಪ್ರೀತಿಯಿಂದ ತನ್ನ ಮೇಲೆ ಅಧಿಕಾರ ಚಲಾಯಿಸಲು ಬಿಟ್ಟುಕೊಟ್ಟಿದ್ದೇನೆ ಎನ್ನುವ ಗಂಡನಂತೆ! ಅಂತಹ ಭ್ರಮೆಯಿಂದ ಮನಸ್ಸಿನ ಮೇಲಿನ ಹಿಡಿತವನ್ನು ಎಂದೂ ಸಡಿಲ ಮಾಡಬಾರದು.

*ಧರ್ಮವನ್ನು ಅರ್ಥ ಮಾಡಿಕೊಳ್ಳಲು ತುಂಬಾ ವಿದ್ಯಾವಂತರಾಗಬೇಕೆ ?*

ರಾಮಕೃಷ್ಣರು ತಮ್ಮ ಹೆಸರನ್ನು ರಾಮಕೆಸ್ಟೋ ಎಂದು ಬರೆಯುತ್ತಿದ್ದರು. ಧರ್ಮವನ್ನು ಅವರಷ್ಟು ಚೆನ್ನಾಗಿ ಬಲ್ಲವರು ಯಾರಿದ್ದಾರೆ? ಧರ್ಮ ಸಿದ್ಧಿಸುವುದು ಪ್ರತ್ಯಕ್ಷ ಅನುಭವದಿಂದ. ಅದಕ್ಕಾಗಿ ಪ್ರಯತ್ನಿಸಬೇಕು.

*ನಿಜವಾದ ಧರ್ಮ ಯಾವುದು ?*

ಮನುಷ್ಯನಿಗೆ ಶಾಂತಿಯನ್ನು ತಂದುಕೊಡುವುದೇ ಧರ್ಮದ ಉದ್ದೇಶ. ಮುಂದಿನ ಜನ್ಮದಲ್ಲಿ ಸುಖ ಸಿಗುವುದೆಂದು ಈಗ ನರಳುವುದು ಬುದ್ಧಿವಂತಿಕೆಯಲ್ಲ. ಇಲ್ಲೇ, ಈಗಲೇ ಶಾಂತಿ ಸಿಗಬೇಕು. ಯಾವ ಧರ್ಮ ಅದನ್ನು ತಂದುಕೊಡಬಲ್ಲುದೋ ಅದೇ ನಿಜವಾದ ಧರ್ಮ.

*ನಿಜವಾದ ಸುಖ ಯಾವುದು?*

ಇಂದ್ರಿಯಸುಖ ಕ್ಷಣಿಕ. ದುಃಖ ಅದರ ಹಿಂದೆಯೇ ಬರುತ್ತದೆ. ನಿಜವಾದ ಸುಖ ಹಾಗೂ ದುಃಖದಿಂದ ವಿಮುಕ್ತಿ ಸಿಗುವುದು ಯಾವುದಾದರೊಂದು ಧರ್ಮದಲ್ಲಿ ಪೂರ್ಣ ಶ್ರದ್ಧೆಯುಂಟಾದಾಗ ಮಾತ್ರವೇ.

*ಮಂತ್ರಗಳ ಮೇಲಿನ ನಮ್ಮ ನಂಬಿಕೆ ಸರಿಯಾದುದೆ?*

ಸರಿಯಲ್ಲದೆ ಮತ್ತೇನು? ನಿನ್ನನ್ನು ಯಾರಾದರೂ ಮೃದು ಮಧುರವಾಗಿ ಕರೆದರೆ ಸಂತೋಷವಾಗುವುದು. ಕರ್ಕಶವಾಗಿ ಮೂದಲಿಸಿದರೆ ಕೋಪ ಬರುವುದು. ಹಾಗೆಯೇ ಅಧಿಷ್ಠಾತೃ ದೇವತೆಗಳೂ ಮಧುರ ಮಂತ್ರಗಳಿಂದ ಸಂತೃಪ್ತರಾಗರೆ ?

*ಕಳ್ಳತನವನ್ನು ಪಾಪವೆಂದು ಏಕೆ ಪರಿಗಣಿಸಲಾಗಿದೆ ?*

ಇತರರಿಗೆ ದುಃಖವನ್ನು ತರುವಂತಹ ಮತ್ತು ನಿನ್ನನ್ನು ದೈಹಿಕವಾಗಿ ಮತ್ತು ಮಾನಸಿಕವಾಗಿ ದುರ್ಬಲಗೊಳಿಸುವಂಥ ಯಾವುದನ್ನೂ ನೀನು ಮಾಡಬಾರದು. ಇದು ಪಾಪ. ಪಾಪ ಪುಣ್ಯಗಳ ವಿಭಾಗ ಇಲ್ಲದಿದ್ದರೆ ಸಾಮಾಜಿಕ ಜೀವನ ಅಸಾಧ್ಯವಾಗುವುದು.

*ಒಳಿತು ಕೆಡುಕುಗಳ ನಿಜವಾದ ಅರ್ಥವೇನು ?*

ನಮ್ಮ ಗುರಿಯನ್ನು ಸೇರಲು ಅನುಕೂಲವಾದುದೆಲ್ಲ ಒಳಿತು. ಅದಕ್ಕೆ ಪ್ರತಿಕೂಲವಾದುದೆಲ್ಲ ಕೆಡುಕು.

*ನಿಮ್ಮಂತಹ ಕಟ್ಟುನಿಟ್ಟಿನ ಸಂನ್ಯಾಸಿಗಳು ರಾಜ ಮಹಾರಾಜರ ಸಹವಾಸ ಮಾಡುವುದು ಸರಿಯೆ?*

ಸ್ವಾಮೀಜಿ ಕಾರಣ ತಿಳಿಸುತ್ತಾರೆ: ಯಾವುದೇ ಮಹತ್ಕಾರ್ಯ ಸಾಧಿಸಬೇಕಾದರೂ ಹಣ ಅವಶ್ಯ. ಅಧಿಕಾರದಲ್ಲಿರುವವರಿಗೆ, ರಾಜಂದಿರಿಗೆ ತಮ್ಮ ಪ್ರಜೆಗಳಿಗೆ ಒಳಿತು ಮಾಡುವ ಸಾಮರ್ಥ್ಯವಿದೆ. ಆದರೆ ಮನಸ್ಸಿಲ್ಲ. ಅವರ ದೃಷ್ಟಿಕೋನ ಬದಲಾಯಿಸಿ, ಸದಿಚ್ಛೆಯನ್ನು ಜಾಗೃತಗೊಳಿಸಬೇಡವೆ ?

ಸಾಮಾನ್ಯವಾಗಿ ಸಾಧುಗಳು ಬಡಕಲಾಗಿರುತ್ತಾರೆ. ಸ್ವಾಮೀಜಿಯವರದು ಕಟ್ಟುಮಸ್ತಾದ ಮೈಕಟ್ಟು. ತಮಾಷೆಯಾಗಿ ತನ್ನ ಈ ಅನಿಸಿಕೆ ಹೇಳಿಕೊಂಡ ಹರಿಪದನಿಗೆ ಹಾಸ್ಯವಾಗಿ ಹೇಳುತ್ತಾರೆ : ''ಇದು ನನ್ನ ಬರಗಾಲದ ನಿಧಿ. ದಿನಗಟ್ಟಲೆ ಆಹಾರವಿಲ್ಲದಿದ್ದರೂ ನನ್ನ ಶರೀರದ ಕೊಬ್ಬು ನನ್ನನ್ನು ಜೀವಂತವಾಗಿರಿಸುತ್ತದೆ. ಮತ್ತೆ ಹೇಳುತ್ತಾರೆ - ಯಾವ ಧರ್ಮ ಮನುಷ್ಯನಿಗೆ ಶಾಂತಿ ತಂದು ಕೊಡುವುದಿಲ್ಲವೋ ಅದನ್ನು ರೋಗದಂತೆ ದೂರವಿಡಬೇಕು. ಶರೀರವನ್ನು ದೃಢವಾಗಿರಿಸಿಕೊಂಡಾಗ ಮಾತ್ರ ಧರ್ಮವನ್ನು ಆಚರಿಸಬಹುದು.''

ವೇದಾಂತದ ಜ್ಞಾನಭಂಡಾರವನ್ನು ವಿದೇಶಗಳಲ್ಲಿ ಪಸರಿಸುವ ಅವರ ಉದ್ದೇಶದ ಸುಳಿವನ್ನು ಅವರು ಮೊದಲು ನೀಡಿದ್ದು ಬೆಳಗಾವಿಯಲ್ಲಿ. ಮುಂದೆ ಅಮೆರಿಕದ ಶಿಕಾಗೋದಲ್ಲಿ ನಡೆಯಲಿರುವ ವಿಶ್ವಧರ್ಮ ಸಮ್ಮೇಳನದಲ್ಲಿ ಭಾಗವಹಿಸಬೇಕೆಂದಿರುವುದನ್ನು ಹರಿಪದನಿಗೆ ತಿಳಿಸುತ್ತಾರೆ. ಹರಿಪದ ಹರ್ಷದಿಂದ ಅದಕ್ಕಾಗಿ ಧನ ಸಂಗ್ರಹ ಮಾಡುವುದಾಗಿ ತಿಳಿಸಿದಾಗ ಅವನನ್ನು ತಡೆದು, ''ಈಗಲೇ ಬೇಡ. ಮೊದಲು ಮುಂದಿನ ಯೋಜನೆ ಸ್ಪಷ್ಟವಾಗಲಿ. ನಂತರ ನೋಡೋಣ'' ಎನ್ನುತ್ತಾರೆ.

ಸ್ವಾಮೀಜಿಯವರ ಒಡನಾಟದಲ್ಲಿ ದಿನಗಳು ಕ್ಷಣಗಳಂತೆ ಕಳೆದು ಹೋದವು. ಅವರು ಮುಂದಿನ ಪ್ರಯಾಣಕ್ಕೆ ಅನುವಾದರು. ಹರಿಪದನಿಗೂ ಅವನ ಪತ್ನಿ ಇಂದುಮತಿಗೂ ಸ್ವಾಮೀಜಿಯವರಿಂದ ಮಂತ್ರದೀಕ್ಷೆ ಪಡೆಯುವ ಆಸೆ. ಆದರೆ ಅವರು ಒಪ್ಪುವರೆ? ಆದರೂ ಪ್ರಯತ್ನಿಸೋಣವೆಂದು ಸ್ವಾಮೀಜಿಯವರನ್ನು ವಿನಂತಿಸಿದ. ಸ್ವಾಮೀಜಿ ಮೊದಲು ಒಪ್ಪಲಿಲ್ಲ. ಆದರೆ ಅವರ ಪ್ರಾಮಾಣಿಕ ಹಂಬಲವನ್ನು ಗುರುತಿಸಿ ಅವರಿಬ್ಬರಿಗೂ ಮಂತ್ರದೀಕ್ಷೆ ನೀಡಿ ಹರಸಿದರು. ಸ್ವಾಮೀಜಿಯವರ ಒಂದು ಭಾವಚಿತ್ರ ಬೇಕೆಂದು ಹರಿಪದ ಬಯಸಿದ. ಸ್ವಾಮೀಜಿ ಒಪ್ಪಲಿಲ್ಲ. ಬಹಳ ಹೆಣಗಾಡಿ ಅವರ ಮನವೊಲಿಸಿ ಒಂದು ಭಾವಚಿತ್ರವನ್ನು ಪಡೆದುಕೊಂಡ.

ಸ್ವಾಮೀಜಿಯವರಿಗೆ ಮುಂದಿನ ಪ್ರಯಾಣದ ರೈಲು ಟಿಕೆಟನ್ನು ಹರಿಪದ ತರಿಸಿಕೊಟ್ಟ. ದಂಪತಿಗಳಿಬ್ಬರೂ ಗುರುಗಳಿಗೆ ಪ್ರಣಾಮ ಸಲ್ಲಿಸಿದರು.

ಮನಸ್ಸಿಲ್ಲದ ಮನಸ್ಸಿನಿಂದ ಸ್ವಾಮೀಜಿಯವರನ್ನು ಬೀಳ್ಕೊಟ್ಟರೂ ಅವರ ಸಂಪರ್ಕದಲ್ಲಿದ್ದರು. ಮುಂದೆಯೂ ಮತ್ತೆರಡು ಬಾರಿ ಸ್ವಾಮೀಜಿಯವರನ್ನು ಭೇಟಿಯಾದ ಸೌಭಾಗ್ಯ ಹರಿಪದನದು.

## ಬೆಳಗಾವಿಯಿಂದ ಬೆಂಗಳೂರಿಗೆ

ಬೆಳಗಾವಿಯಿಂದ ಸ್ವಾಮೀಜಿಯವರು ಮರ್ಮಗೋವಕ್ಕೆ ಹೋಗಿ ಅಲ್ಲಿ ಸುಬ್ರಾಯ ನಾಯಕ್ ಎಂಬವರ ಅತಿಥಿಯಾಗಿದ್ದರು. (ಸ್ವಾಮೀಜಿಯವರಿಂದ ವಿಶೇಷವಾಗಿ ಪ್ರಭಾವಿತರಾದ ಅವರು, ಮುಂದೆ ಸಂನ್ಯಾಸ ಸ್ವೀಕರಿಸಿ ಸುಬ್ರಹ್ಮಣ್ಯಾನಂದರಾದರು) ಕ್ರೈಸ್ತ ಧರ್ಮದ ಅಧಿಕೃತ ಲ್ಯಾಟಿನ್ ಭಾಷೆಯಲ್ಲಿದ್ದ ಗ್ರಂಥಗಳ ಅಧ್ಯಯನ ಸ್ವಾಮೀಜಿಯವರ ಗೋವಾ ಭೇಟಿಯ ಮುಖ್ಯ ಉದ್ದೇಶವಾಗಿತ್ತು. ಮೂರೇ ದಿನಗಳಲ್ಲಿ ಅಲ್ಲಿನ ಪ್ರಸಿದ್ಧ ಸೆಮಿನರಿಗಳಲ್ಲಿ ಆಮೂಲಾಗ್ರ ಅಧ್ಯಯನ ಮಾಡಿ ಕ್ರೈಸ್ತ ಪಾದ್ರಿಗಳನ್ನೇ ಬೆರಗುಗೊಳಿಸಿದರು. ಈ ಅಧ್ಯಯನ ಅವರಿಗೆ ಮುಂದೆ ವಿದೇಶಗಳಲ್ಲಿ ಸಹಾಯಕವಾಯಿತು. ಬಹುಶಃ ಅವರ ಗೋವಾ ಭೇಟಿಯ ಹಿಂದೆ ಇದೇ ಉದ್ದೇಶ ಇದ್ದಂತೆ ಕಾಣುತ್ತದೆ. ಗೋವಾದಿಂದ ಸ್ವಾಮೀಜಿ ಬೆಂಗಳೂರಿಗೆ ತೆರಳಿದರು.

ಬೆಂಗಳೂರಿನಲ್ಲಿ ಸ್ವಾಮೀಜಿಯವರು ಈಗಿನ ಮೆಜೆಸ್ಟಿಕ್ ಪ್ರದೇಶದ, ಕಾಳಪ್ಪ ಛತ್ರದಲ್ಲಿ ಕೆಲದಿನ ವಾಸವಾಗಿದ್ದರು. ಅಲ್ಲೊಂದು ದೊಡ್ಡ ಕೆರೆಯಿತ್ತು. ಅಲ್ಲಿ ವಿಹರಿಸುವ ಸಮಯದಲ್ಲಿ, ಅರಳೆ ಪೇಟೆ ಸಮೀಪ ಸುಗಪ್ಪ ಎಂಬ ಚಿನ್ನದ ವ್ಯಾಪಾರಿಯ ಮನೆಯ ಬಳಿ ಒಂದು ಕಲ್ಲುಚಪ್ಪಡಿಯ (ಬೆಂಚು) ಮೇಲೆ ವಿರಮಿಸುತ್ತಿದ್ದರು. ಆಗ ಅವರೆಡೆ ಲಕ್ಷ್ಯ ಕೊಡದ ಜನರಿಗೆ, ಅವರ ಹಿರಿಮೆ ಅರಿವಾದದ್ದು ಅವರು ಹೊರದೇಶದಲ್ಲಿ ಪ್ರಸಿದ್ಧರಾಗಿ, ಅವರೇ ವಿವೇಕಾನಂದರು ಎಂದು ತಿಳಿದ ಮೇಲೆಯೇ. ಸ್ವಾಮೀಜಿಯವರು ವಿರಮಿಸುತಿದ್ದ ಆ ಭಾಗ್ಯಶಾಲಿ ಕಲ್ಲಿನ ಬೆಂಚು ಬಹಳ ಕಾಲ ಅರಳೆ ಪೇಟೆಯ 'ತುಳಸಿ ತೋಟ' ಎಂಬಲ್ಲೇ ಇದ್ದಿತು. ಈಗ ಅದು ಬಸವನಗುಡಿ ರಾಮಕೃಷ್ಣ ಮಠದ ವಿವೇಕಾನಂದ ಮಂಟಪದಲ್ಲಿ ವಿರಾಜಿಸುತ್ತಿದೆ. ಅದರ ಮೇಲೆ ಸ್ವಾಮೀಜಿಯವರ, ಕುಳಿತ ಭಂಗಿಯಲ್ಲಿರುವ ಮೂರ್ತಿಯನ್ನೂ ಸ್ಥಾಪಿಸಲಾಗಿದೆ.

ಕೆಲ ದಿನಗಳ ನಂತರ ಸ್ವಾಮೀಜಿಯವರಿಗೆ ಡಾ. ಪದ್ಮನಾಭನ್ ಪಲ್ಪು ಎಂಬ ಸರಕಾರಿ ವೈದ್ಯಾಧಿಕಾರಿಯ ಪರಿಚಯವಾಗಿ ಅವರಲ್ಲಿ ಉಳಿದುಕೊಂಡರು. ಡಾ.ಪಲ್ಪುರವರು ಕೇರಳದವರು. ಕೆಳವರ್ಗದ ಈಡಿಗ ಕೋಮಿನವರು. ಆಗ ಪ್ರಚಲಿತವಿದ್ದ ಜಾತಿ ಭೇದ, ಮೇಲು ಕೀಳು ಭಾವನೆಗಳಿಗೆ ಬಲಿಯಾಗಿ, ತಮಗೆ ಸಿಗಬೇಕಾದ ಅವಕಾಶದಿಂದ ವಂಚಿತರಾದವರು. ಅವರ ಜಾತಿಯವರಿಗೆ ಕೇರಳದಲ್ಲಿ ಉದ್ಯೋಗದ ಅವಕಾಶವೂ ಸಿಗುತ್ತಿರಲಿಲ್ಲ. ಹಾಗಾಗಿ ಅವರು ಬೆಂಗಳೂರಿನಲ್ಲಿ ನೆಲೆಸಿದ್ದರು. ಸಮಾಜದಲ್ಲಿ ತಮ್ಮವರ ದಯನೀಯ ಸ್ಥಿತಿಯನ್ನು ಅವರು ಸ್ವಾಮೀಜಿಯವರಲ್ಲಿ ತೋಡಿಕೊಂಡರು.

ಕ್ರೈಸ್ತ ಮಿಶನರಿಗಳು ಸಮಾಜದಲ್ಲಿನ ಈ ಸ್ಥಿತಿಯ ದುರುಪಯೋಗ ಪಡೆದು ಲಕ್ಷಾನುಗಟ್ಟಲೆ ದಲಿತರನ್ನು, ಕೆಳಜಾತಿಯವರನ್ನು ಮತಾಂತರಿಸುತ್ತಿದ್ದರು. ಹೀಗೆ ಮತಾಂತರಗೊಂಡವರಿಗೆ ಸಮಾಜ ಉತ್ತಮ ಸ್ಥಾನಮಾನ ನೀಡುತ್ತಿತ್ತು.

ಹಿಂದೂ ಸಮಾಜದ ಈ ಮೂರ್ಖ ವ್ಯವಹಾರಕ್ಕೆ ಸ್ವಾಮೀಜಿ ರೋಸಿ ಹೋಗಿದ್ದರು. ಜಾತಿಭೇದಕ್ಕೆ ಅವರ ತೀವ್ರ ವಿರೋಧವಿತ್ತು.

ಸ್ವಾಮೀಜಿಯವರು , ತಮ್ಮ ತಮ್ಮ ಸಮಾಜದ ಉದ್ಧಾರಕ್ಕೆ, ಮೇಲ್ಜಾತಿಯವರ ಹಂಗಿಲ್ಲದೆ, ತಮ್ಮದೇ ಆದ ಸಂಘಟನೆಯನ್ನು ಸ್ಥಾಪಿಸುವಂತೆ ಕರೆಯಿತ್ತರು. ಅವರ ಸಲಹೆಯನ್ನು ಗಂಭೀರವಾಗಿ ಪರಿಗಣಿಸಿದ ಪಲ್ಪು ಅವರ ಪ್ರಯತ್ನದಿಂದ , ಶ್ರೀ ನಾರಾಯಣ ಗುರು ಎಂಬ ಮುಖಂಡರ ನೇತೃತ್ವದಲ್ಲಿ, ಕೇರಳದಲ್ಲಿ SNDPY (ಶ್ರೀ ನಾರಾಯಣ ಧರ್ಮ ಪ್ರವರ್ತನ ಯೋಗಂ) ಎಂಬ ಸಂಘಟನೆಯ ಮೂಲಕ ಹಿಂದುಳಿದವರ ಅಭ್ಯುದಯದ ಕಾರ್ಯ ಪ್ರಾರಂಭವಾಯಿತು. ಈ ರೀತಿ ಸ್ವಾಮೀಜಿಯವರು ಶೋಷಿತ ವರ್ಗಗಳಲ್ಲಿ ಸ್ವಾಭಿಮಾನ ತುಂಬುವ ಕೆಲಸ ಮಾಡಿದರು.

ದಿವಾನ್ ಸರ್ ಕೆ. ಶೇಷಾದ್ರಿ ಅಯ್ಯರ್ ಅವರು ೧೮ ವರ್ಷಗಳ ದೀರ್ಘಕಾಲ ಮೈಸೂರು ಸಂಸ್ಥಾನದ ದಿವಾನರಾಗಿದ್ದರು. ಪ್ರಾಮಾಣಿಕತೆ, ದಕ್ಷತೆಗೆ ಹೆಸರಾದವರು; ಖಂಡಿತವಾದಿ. ರಾಜ್ಯದ ಅನೇಕ ಅಭಿವೃದ್ಧಿ ಕಾರ್ಯಗಳಿಗೆ ಕಾರಣಕರ್ತರು. ಮಹಾರಾಜರ ಪೂರ್ಣ ವಿಶ್ವಾಸಕ್ಕೆ ಪಾತ್ರರಾದವರು.

ಒಂದು ದಿನ ಬೆಂಗಳೂರಿನಲ್ಲಿ ಅವರಿಗೆ ಸ್ವಾಮೀಜಿಯವರ ಪರಿಚಯವಾಯಿತು. ಪ್ರತಿಭೆಯನ್ನು ಗುರುತಿಸುವುದರಲ್ಲಿ ನಿಷ್ಣಾತರಾದ ಅವರಿಗೆ ಕೆಲವು ನಿಮಿಷಗಳಲ್ಲೇ ಸ್ವಾಮೀಜಿ ಅಸಾಮಾನ್ಯ ವ್ಯಕ್ತಿ ಎಂದು ನಂಬಿಕೆ ಉಂಟಾಯಿತು. ಅಸಾಧಾರಣ ಜ್ಞಾನ, ಅಂತರ್ದೃಷ್ಟಿ, ಅಪೂರ್ವ ಮೇಧಾಶಕ್ತಿಯ ಈ ಯುವ ಸಂನ್ಯಾಸಿ ಮುಂದೊಂದು ದಿನ ತನ್ನ ಅಪಾರ ಆಧ್ಯಾತ್ಮಿಕ ಶಕ್ತಿ ಹಾಗೂ ಅಯಸ್ಕಾಂತೀಯ ವ್ಯಕ್ತಿತ್ವದಿಂದ ಇಡೀ ಜಗತ್ತನ್ನೇ ಗೆಲ್ಲಬಲ್ಲ. ತಾನು ಈವರೆಗೆ ಕಂಡ ಪಂಡಿತರೆಲ್ಲರ ತಿಳುವಳಿಕೆ, ಇವರ ಮುಂದೆ ತೀರ ಅಲ್ಪ. ಇಷ್ಟು ಚಿಕ್ಕ ವಯಸ್ಸಿನಲ್ಲಿ ಇಷ್ಟೊಂದು ಅಪಾರ ಜ್ಞಾನ ಒಂದು ಅದ್ಭುತವೇ ಸರಿ, ಎಂಬ ನಿಷ್ಕರ್ಷೆಗೆ ಅವರು ಬಂದರು. ಈ ಯುವ ಸಂನ್ಯಾಸಿಯನ್ನು ಮೈಸೂರಿನ ಮಹಾರಾಜರಿಗೆ ಅವಶ್ಯವಾಗಿ ಪರಿಚಯಿಸಲೇಬೇಕೆಂದು ಅವರು ನಿರ್ಧರಿಸಿದರು.

ಅವರ ಆಹ್ವಾನದ ಮೇರೆಗೆ ಸ್ವಾಮೀಜಿಯವರು ಮೈಸೂರಿಗೆ ಬಂದು ಎರಡು ಮೂರು ವಾರಗಳ ಕಾಲ ಉಳಿದುಕೊಂಡರು. ದಿವಾನರ ವಾಸಸ್ಥಳದ ಪಕ್ಕದಲ್ಲೇ ಇದ್ದ ನಿರಂಜನ ಮಠದಲ್ಲಿ ಆಗ ಅವರ ವಾಸ. ಪುರಜನರ ಕೋರಿಕೆಯಂತೆ ಸಮೀಪದ ಸದ್ವಿದ್ಯಾ ಪಾಠ ಶಾಲೆಯಲ್ಲಿ ಅವರು ಪ್ರವಚನ ನೀಡುತ್ತಿದ್ದರು. ಅವನ್ನು ಅಂಬಳೆ ಅಣ್ಣಯ್ಯ ಪಂಡಿತರು (ದಿವಾನರ ಬೀಗರು) ಅನುವಾದಿಸುತ್ತಿದ್ದರಂತೆ. ಅವರ ಆಧುನಿಕ ದೃಷ್ಟಿಕೋನ, ಆದರ್ಶ ವಿಚಾರಗಳು ನಾಗರಿಕರನ್ನು ಆಕರ್ಷಿಸಿದವು. ಅವರನ್ನು ಅನೇಕ ಮುಖಂಡರು,ಅರಮನೆಯ ಅಧಿಕಾರಿಗಳು, ಇತರ ಪ್ರತಿಷ್ಠಿತ ವ್ಯಕ್ತಿಗಳು ಭೇಟಿಯಾದರು.

## ಮಹಾರಾಜರೊಡನೆ ರಾಜಯೋಗಿ

ರಾಜ ಚಾಮರಾಜ ಒಡೆಯರು ಅತ್ಯಂತ ಯೋಗ್ಯ ಹಾಗೂ ಸಮರ್ಥ ಆಡಳಿತಗಾರರು. ಅಪಾರ ಜನಾದರಣೆ ಗಳಿಸಿದ್ದವರು. ಅವರ ಆಡಳಿತದಲ್ಲಿ ರಾಜ್ಯವು ಸರ್ವಾಂಗೀಣ ಪ್ರಗತಿಯನ್ನು ಹೊಂದಿತ್ತು. ಆದರ್ಶ ರಾಜ್ಯವೆಂದು ಹೆಸರು ಗಳಿಸಿತ್ತು. ಮಹಾರಾಜರೂ ಸ್ವಾಮೀಜಿಯ ಸಮವಯಸ್ಕರು. ಇಬ್ಬರೂ ೩೦ ವರ್ಷದ ಯುವಕರು.

ದಿವಾನರು ಸ್ವಾಮೀಜಿಯವರನ್ನು ಮಹಾರಾಜರಿಗೆ ಪರಿಚಯಿಸಲು ಅರಮನೆಗೆ ಕರೆದೊಯ್ದರು. ಇದೊಂದು ಐತಿಹಾಸಿಕ ಘಟನೆ.


ಮೈಸೂರು ಮಹಾರಾಜ
ಚಾಮರಾಜ ಒಡೆಯರ್

ಸ್ವಾಮೀಜಿಯವರ ದಿವ್ಯ ತೇಜಸ್ಸು, ರಾಜಗಾಂಭೀರ್ಯ, ಮಿಂಚುವ ಕಣ್ಣುಗಳು ಮಹಾರಾಜರನ್ನು ಬೆರಗುಗೊಳಿಸಿದವು. ಅವರ ಅಪಾರ ಶಾಸ್ತ್ರಜ್ಞಾನ, ಮೇಧಾಶಕ್ತಿ, ಯಾರನ್ನೂ ಸೆಳೆಯಬಲ್ಲ ಪ್ರಭಾವಿ ವ್ಯಕ್ತಿತ್ವ ಮಹಾರಾಜರನ್ನು ಗೆದ್ದವು. ಪ್ರಥಮ ಭೇಟಿಯಲ್ಲೇ ಅವರಲ್ಲಿ ಸ್ನೇಹಾಂಕುರವಾಯಿತು. ಸ್ವಾಮೀಜಿಯವರು ತಮ್ಮ ಅತಿಥಿಯಾಗಿ ಉಳಿಯಬೇಕೆಂಬ ಮಹಾರಾಜರ ವಿನಂತಿಯನ್ನು ಒಪ್ಪಿ ಅವರ ಗೌರವ ಅತಿಥಿಯಾಗಿ ಅರಮನೆಯಲ್ಲಿ ಉಳಿದುಕೊಂಡರು.

ಅರಮನೆಯ ಅತಿಥಿಯಾಗಿದ್ದಾಗ ಸ್ವಾಮೀಜಿಯವರು ಒಂದು ದಿನ ಬೆಟ್ಟದ ಚಾಮುಂಡೇಶ್ವರಿ ದೇವಿಯ ದರ್ಶನಕ್ಕೆ ಹೋದರು.

ದೇವಸ್ಥಾನದ ಒಳಕ್ಕೆ ಬರುತ್ತಿದ್ದಂತೆಯೇ ದೇವಸ್ಥಾನದ ಕೆಲಸಗಾರರು, ಪರಿಚಾರಕರು, ಇತರೇ ಕೆಲಸ ಮಾಡುತ್ತಿದ್ದವರೂ, ದೇವಸ್ಥಾನಕ್ಕೆ ಬಂದಿದ್ದ ಭಕ್ತರೂ ಎಲ್ಲರೂ ಏನೋ ಅದ್ಭುತವನ್ನು ಕಂಡವರಂತೆ, ಅರ್ಚಕರೂ ಸೇರಿ ಬೆಕ್ಕಸ ಬೆರಗಾಗಿ ನಿಂತುಬಿಟ್ಟರು. ಆಜಾನುಬಾಹು, ಗಂಭೀರ ನಡಿಗೆ, ಧೀರೋದಾತ್ತ ಆಕಾರ, ತೇಜಃಪುಂಜ ಮುಖ, ವಿಶಾಲವಾದ ಕಣ್ಣುಗಳು. ಆ ಕಣ್ಣುಗಳಲ್ಲಿ ಏನೋ ವಿಶೇಷ ಆಕರ್ಷಣೀಯವಾದ ದೃಷ್ಟಿ. ಜೊತೆಗೆ ಕಾವಿಯ ಉಡುಪು. ಎಲ್ಲವೂ ಸೇರಿ ಅವನೊಬ್ಬ ಸಾಮಾನ್ಯ ಸಂನ್ಯಾಸಿಯಲ್ಲ ಎನ್ನುವ ಭಾವನೆ ಎಲ್ಲರಿಗೂ. ಅವರು ನೇರವಾಗಿ ಅಮ್ಮನವರಿಗೆ ಪ್ರಣಾಮ ಸಲ್ಲಿಸಿ, ಅರ್ಚಕರು ಗೌರವದಿಂದ ನೀಡಿದ ತೀರ್ಥ ಪ್ರಸಾದಗಳನ್ನು ಸ್ವೀಕರಿಸಿ ಮರಳಿದರು. ಇದು ಸ್ವಾಮೀಜಿಯವರನ್ನು ಕಣ್ಣಾರೆ ಕಂಡ ಓರ್ವ ಅರ್ಚಕರ ಅನುಭವ.

ಮಹಾರಾಜರು ಸ್ವಾಮೀಜಿಯವರನ್ನು ಹಲವು ಬಾರಿ ವೈಯಕ್ತಿಕವಾಗಿ ಭೇಟಿಯಾಗಿ ಹಲವಾರು ವಿಷಯಗಳನ್ನು ಚರ್ಚಿಸುತ್ತಿದ್ದರು. ಪ್ರಮುಖ ವಿಚಾರಗಳಲ್ಲಿ ಅವರ ಸಲಹೆಯನ್ನೂ ಪಡೆಯುತ್ತಿದ್ದರು. ಹೀಗೆ ಅವರಿಬ್ಬರಲ್ಲಿ ಮೈತ್ರಿ ವೃದ್ಧಿಯಾಗುತ್ತ ಹೋಗಿ, ಸ್ವಾಮೀಜಿಯವರು ಮಹಾರಾಜರಿಗೆ ಪರಮಾಪ್ತರಾದರು. ಮಹಾರಾಜರ ಮೇಲೆ ಸ್ವಾಮೀಜಿಯವರ ಪ್ರಭಾವ ಗಾಢವಾಯಿತು. ಸ್ವಾಮೀಜಿಯರನ್ನು ಮಹಾರಾಜರು ಕುಲಗುರುಗಳಷ್ಟೇ ಭಕ್ತಿ ಗೌರವಗಳಿಂದ ಕಾಣುತ್ತಿದ್ದರು.

ಸ್ವಾಮೀಜಿಯವರು ತಮ್ಮ ಅಭಿಪ್ರಾಯಗಳನ್ನು ಯಾವುದೇ ಅಳುಕಿಲ್ಲದೆ, ಮುಚ್ಚುಮರೆಯಿಲ್ಲದೆ ಹೇಳಿಬಿಡುತ್ತಿದ್ದರು. ಒಮ್ಮೆ ಆಸ್ಥಾನದಲ್ಲಿ ಮಹಾರಾಜರು ಸಭಾಸದರ ಮುಂದೆ ಸ್ವಾಮೀಜಿಯವರನ್ನು ಕೇಳಿದರು: ''ನಮ್ಮ ಆಸ್ಥಾನಿಕರ ವಿಷಯವಾಗಿ ನಿಮ್ಮ ಅಭಿಪ್ರಾಯವೇನು?''

''ಮಹಾರಾಜ, ನಿನ್ನಲ್ಲಿ ಔದಾರ್ಯ ತುಂಬಿದೆ. ಆದರೆ ನಿನ್ನನ್ನು ಸುತ್ತುವರಿದಿರುವ ಅಧಿಕಾರಿಗಳೆಲ್ಲ ಹೊಗಳುಭಟ್ಟರೆ !''

ಇಂಥ ನೇರ ಉತ್ತರವನ್ನು ಮಹಾರಾಜರು ನಿರೀಕ್ಷಿಸಿರಲಿಲ್ಲ, ಆದರೂ ಸಾವರಿಸಿಕೊಂಡು ಮಾತು ಬದಲಾಯಿಸಿದರು. ಆಮೇಲೆ ಅವರನ್ನು ಏಕಾಂತದಲ್ಲಿ ಹೇಳಿದರು, ''ಸ್ವಾಮೀಜಿ, ಹೀಗೆ ಮುಚ್ಚುಮರೆಯಿಲ್ಲದೆ ಮಾತನಾಡುವುದು ಯಾವಾಗಲೂ ಕ್ಷೇಮವಲ್ಲ. ಯಾರಾದರೂ ನಿಮಗೆ ಕೇಡು ಮಾಡಿದರೂ ಮಾಡಬಹುದು. ಆದ್ದರಿಂದ ದಯವಿಟ್ಟು ನೀವು ಈ ಬಗ್ಗೆ ಎಚ್ಚರ ವಹಿಸಬೇಕು.''

ಮಹಾರಾಜರ ಮಾತನ್ನು ಕೇಳಿ ಸ್ವಾಮೀಜಿ ಸಿಡಿದೆದ್ದರು. ಒಬ್ಬ ಪ್ರಾಮಾಣಿಕ ಸಂನ್ಯಾಸಿ ಪ್ರಾಣವೇ ಹೋಗುವ ಸಂದರ್ಭ ಬಂದರೂ ಸತ್ಯವನ್ನೇ ಹೇಳುವನಲ್ಲದೆ ಸುಳ್ಳು ಹೇಳಲಾರ ಎಂದು ಮನವರಿಕೆ ಮಾಡಿಕೊಟ್ಟರು.

ಅಂದಿನ ದಿನಗಳ ಕೆಲವೊಂದು ಸ್ವಾರಸ್ಯಕರ ಘಟನೆಗಳು ಸ್ವಾಮೀಜಿಯವರ ಬಹುಮುಖ ಪ್ರತಿಭೆಗೆ ಕನ್ನಡಿಯಾಗಿವೆ:

ಒಂದು ದಿನ ಮೈಸೂರಿನ ಒಬ್ಬ ಮುಸಲ್ಮಾನ ಶಾಸಕ ಅಬ್ದುಲ್ ರಹಮಾನ್, ಸ್ವಾಮೀಜಿಯವರನ್ನು ಕಾಣಲು ಬಂದಿದ್ದ. ಅವರ ಕುರಾನ್ ಕುರಿತ ಜ್ಞಾನವನ್ನು ತಿಳಿದು ತನ್ನ ಕೆಲವು ಸಂಶಯಗಳನ್ನು ಪರಿಹರಿಸಿಕೊಂಡ. ಒಬ್ಬ ಹಿಂದೂ ಸಂನ್ಯಾಸಿಗೆ ಮುಸ್ಲಿಂ ಧರ್ಮಗ್ರಂಥದ ಮೇಲಿರುವ ಪರಿಣತಿ ಕಂಡು ಎಲ್ಲರಿಗೂ ಆಶ್ಚರ್ಯ!

ಸ್ವಾಮೀಜಿಯವರಿಗೆ ಅರಮನೆಯಲ್ಲಿ ಒಂದು ದಿನ ಒಬ್ಬ ಆಸ್ಟ್ರಿಯಾ ದೇಶದ ಸಂಗೀತಗಾರನ ಭೇಟಿಯಾಯಿತು. ಅವನೊಂದಿಗೆ ಅವರು ಪಾಶ್ಚಾತ್ಯ ಸಂಗೀತದ ಬಗ್ಗೆ ಚರ್ಚಿಸಿದರು. ಅವರ ಪಾಶ್ಚಾತ್ಯ ಸಂಗೀತದ ಜ್ಞಾನವನ್ನು ಕಂಡು ಆ ಸಂಗೀತಗಾರ ಕೂಡ ಬೆರಗಾದ.


ಹಳೆಯ ಮೈಸೂರು ಅರಮನೆ

ಇನ್ನೊಮ್ಮೆ ಅರಮನೆಯ ವಿದ್ಯುತ್ ತಂತ್ರಜ್ಞನೊಡನೆ ಮಾತು ಕತೆ ನಡೆಯಿತು. ವಿದ್ಯುತ್ ಶಕ್ತಿಯ ವಿಷಯದಲ್ಲೂ ಸ್ವಾಮೀಜಿಯ ವರ ಜ್ಞಾನ ತಂತ್ರಜ್ಞನನ್ನೂ ಮೀರಿಸಿತ್ತು.

ಇನ್ನೊಂದು ಸ್ವಾರಸ್ಯಕರ ಘಟನೆ. ಅರಮನೆಯಲ್ಲಿ ಒಂದು ವಿದ್ವತ್‌ಗೋಷ್ಠಿ. ಹೆಸರಾಂತ ಪಂಡಿತರು ಭಾಗವಹಿಸಿದ್ದರು. ದಿವಾನರು ಸಭೆಯ ಅಧ್ಯಕ್ಷರು. ಸ್ವಾಮೀಜಿಯವರನ್ನೂ ಆಹ್ವಾನಿಸಿದ್ದರು. ಚರ್ಚೆಯ ವಿಷಯ ವೇದಾಂತ. ಸಂಸ್ಕೃತದಲ್ಲಿ ವೇದಾಂತದ ಬೇರೆ ಬೇರೆ ಮುಖದ ಚರ್ಚೆಯಾಯಿತು. ಆದರೆ ಯಾವ ನಿರ್ಣಯಕ್ಕೂ ಬರುವ ಸೂಚನೆ ಕಾಣಲಿಲ್ಲ. ಕೊನೆಗೆ ಸ್ವಾಮೀಜಿಯವರ ನಿಲುವನ್ನು ಕೇಳಿದಾಗ ಸ್ವಾಮೀಜಿ ಎದ್ದು ನಿಂತು ಪಾಶ್ಚಾತ್ಯ ದೇಶಗಳಲ್ಲಿ ತಮ್ಮಿಂದ ಮುಂದೆ ಮೊಳಗಲಿರುವ ವೇದಾಂತದ ಅದ್ಭುತ ಸಂದೇಶವನ್ನು ಸುಲಲಿತ ಸಂಸ್ಕೃತದಲ್ಲಿ ವಿವರಿಸಿದರು. ಅವರ ತರ್ಕಬದ್ಧ ವಿವರಣೆಯನ್ನು ಮೆಚ್ಚಿದ ಪಂಡಿತವರ್ಗವು ಅವರನ್ನು ಮುಕ್ತ ಕಂಠದಿಂದ ಶ್ಲಾಘಿಸಿತು.

ಸ್ವಾಮೀಜಿಯವರಿಗೆ ಏನಾದರೂ ಕೊಡುಗೆ ನೀಡಬೇಕು, ಏನಾದರೂ ಸೇವೆ ಮಾಡಬೇಕೆಂಬ ಹಂಬಲ ಮಹಾರಾಜರಿಗೆ. ತನ್ನ ಇಂಗಿತವನ್ನು ಅವರಲ್ಲಿ ತೋಡಿಕೊಂಡರು. ಆಗ ಸ್ವಾಮೀಜಿ, ದೇಶದ ಬಡ ಜನರ, ದೀನ ದಲಿತರ ದುರವಸ್ಥೆಯನ್ನು ರಾಜರ ಗಮನಕ್ಕೆ ತರುತ್ತಾ, ''ದೇಶ ವಿದೇಶಗಳಲ್ಲಿ ಸನಾತನ ಧರ್ಮದ ಅಮೂಲ್ಯ ಸಂಪತ್ತಾದ ಆಧ್ಯಾತ್ಮಿಕ ಜ್ಞಾನವನ್ನು ಹರಡಿ, ಅಲ್ಲಿನ ಪಾಶ್ಚಾತ್ಯ ವಿಜ್ಞಾನದ ಸಹಾಯದಿಂದ ನಮ್ಮಲ್ಲಿನ ಆರ್ಥಿಕ, ಸಾಮಾಜಿಕ ಸ್ಥಿತಿಗಳನ್ನು ಉತ್ತಮಪಡಿಸಬೇಕು. ಹೀಗೆ ಪರಸ್ಪರ ಸಹಕಾರದಿಂದ ಸ್ವದೇಶಿಯರ ಅಭ್ಯುದಯವನ್ನು ಸಾಧಿಸಬೇಕು. ತಮ್ಮಂತಹ ಸಮರ್ಥರೂ, ಶಕ್ತಿಶಾಲಿಗಳೂ ಆದ ರಾಜರುಗಳು ಪ್ರಯತ್ನಪಟ್ಟರೆ ಕಾರ್ಯಾರಂಭವನ್ನಾದರೂ ಮಾಡಬಹುದು. ಇದರಲ್ಲಿ ನೀವು ಮುಂದಾಳುಗಳಾಗಬೇಕೆಂಬುದೇ ನನ್ನ ಪ್ರಾರ್ಥನೆ'' ಎಂದು ಕೋರಿದರು. ಇದೇ ಉದ್ದೇಶಕ್ಕಾಗಿ ತಾನು ಅಮೆರಿಕೆಗೆ ಹೋಗಬೇಕೆಂದಿರುವುದನ್ನೂ ತಿಳಿಸಿದರು. ಒಬ್ಬ ಸಂನ್ಯಾಸಿ ತನ್ನ ಮಾತೃಭೂಮಿಗಾಗಿ ಮರುಗುವುದನ್ನು ಕಂಡು ಮಹಾರಾಜರ ಹೃದಯ ತುಂಬಿಬಂತು. ಅಮೆರಿಕಾಗೆ ಹೋಗುವುದಾದರೆ ಎಲ್ಲ ಖರ್ಚನ್ನೂ ತಾನೇ ವಹಿಸಿಕೊಳ್ಳಲು ಮುಂದಾದರು. ಆದರೆ ತಾನಿನ್ನೂ ಯಾವುದೇ ನಿಷ್ಕರ್ಷೆಗೆ ಬಂದಿಲ್ಲ, ಹಾಗಾಗಿ ಈಗ ಬೇಡ ಎಂದು ಹಣ ಪಡೆಯಲು ಸ್ವಾಮೀಜಿ ನಿರಾಕರಿಸಿದರು.

ಸ್ವಾಮೀಜಿಯವರ ಸಾಮೀಪ್ಯ ಹೆಚ್ಚಿದಂತೆ ರಾಜರಿಗೆ ಅವರ ಮೇಲೆ ಪ್ರೀತಿ, ವಿಶ್ವಾಸ ಅಧಿಕವಾಗುತ್ತ ಬಂತು. ಅದಾಗಲೇ ೨-೩ ವಾರ ಕಳೆದಿತ್ತು. ಸ್ವಾಮೀಜಿ ರಾಮೇಶ್ವರಕ್ಕೆ ಹೊರಡಲು ಅನುವಾದರು. ಮಹಾರಾಜರು ತುಂಬಾ ದುಃಖಿತರಾದರು. ಸ್ವಾಮೀಜಿಯವರ ಪಾದಪೂಜೆ ಮಾಡಲು ಬಯಸಿದರು, ಆದರೆ ಸ್ವಾಮೀಜಿ ಒಪ್ಪಲಿಲ್ಲ. ಹೊರಡುವ ಸಮಯ ಬಂತು. ಮಹಾರಾಜರು ಶಿರಬಾಗಿ ನಮಸ್ಕರಿಸಿದರು. ದಿವಾನರು ಸ್ವಾಮೀಜಿಯ ಜೇಬಿಗೆ ನೋಟುಗಳ ಕಟ್ಟೊಂದನ್ನು ತುರುಕಲು ಯತ್ನಿಸಿದರು. ಆದರೆ ಸಫಲರಾಗಲಿಲ್ಲ. ''ನನಗೇನಾದರೂ ಕೊಡಲೇಬೇಕೆಂದಿದ್ದರೆ ಒಂದು ರೈಲ್ ಟಿಕೆಟ್ಟು ತೆಗೆಸಿ ಕೊಡಿ'' ಎಂದರು ಸ್ವಾಮೀಜಿ. ದಿವಾನರು ಅವರಿಗೆ ಎರಡನೇ ದರ್ಜೆಯ ಟಿಕೆಟ್ಟನ್ನು ಕೊಡಿಸಿದರು. ಸ್ವಾಮೀಜಿಯವರು ಕೊಚ್ಚಿಗೆ ಪಯಣ ಮುಂದುವರಿಸಿದರು.

ಮಹಾರಾಜರು ಮುಂದೆಯೂ ಸ್ವಾಮೀಜಿಯವರೊಡನೆ ನಿರಂತರ ಸಂಪರ್ಕದಲ್ಲಿದ್ದರು. ಅವರ ವಿದೇಶ ಪ್ರವಾಸಕ್ಕೆ ಮುಕ್ತ ಹಸ್ತದಿಂದ ಸಹಾಯ ಮಾಡಿದರು. ಸ್ವಾಮೀಜಿಯವರೂ ಮಹಾರಾಜರ ಮೇಲೆ ತುಂಬಾ ಭರವಸೆಯನ್ನು ಇಟ್ಟುಕೊಂಡಿದ್ದರು. ವಿಶ್ವಧರ್ಮ ಸಮ್ಮೇಳನದ ಅದ್ಭುತ ಯಶಸ್ಸಿನ ನಂತರ ಶಿಕಾಗೋದಿಂದ ಸ್ವಾಮೀಜಿ ಮಹಾರಾಜರಿಗೆ ಒಂದು ಪತ್ರ ಬರೆದು ಅವರ ಸಹಾಯಕ್ಕಾಗಿ ಕೃತಜ್ಞತೆ ಸೂಚಿಸಿ, ನಂತರ ಹೇಳಿದರು, ''ಭಾರತದ ಇಂದಿನ ದುರ್ಗತಿಗೆ ದಾರಿದ್ರ್ಯವೇ ಕಾರಣ... ಜನ ಸಾಮಾನ್ಯರಿಗೆ ಶಿಕ್ಷಣ ನೀಡಿ, ನಷ್ಟವಾದ ಅವರ ವ್ಯಕ್ತಿತ್ವವನ್ನು ಅವರಿಗೆ ಮರಳಿ ದೊರಕಿಸಿ ಕೊಡುವುದು ನಮ್ಮ ಪ್ರಥಮ ಕರ್ತವ್ಯ.'' ಬಳಿಕ ತಮ್ಮ ಪತ್ರವನ್ನು ಮುಕ್ತಾಯಗೊಳಿಸುತ್ತ ಹೀಗೆ ಬರೆದರು :

''ನನ್ನ ನೆಚ್ಚಿನ ಮಹಾರಾಜ, ಜೀವನವು ಕ್ಷಣಿಕವಾದುದು. ಜಗತ್ತಿನ ಭೋಗಗಳು ತಾತ್ಕಾಲಿಕವಾದವುಗಳು. ಆದರೆ ಯಾರು ಇತರರಿಗಾಗಿ ಬದುಕುತ್ತಾರೆಯೋ ಅವರದು ಮಾತ್ರವೇ ಜೀವನ : ಉಳಿದವರು ಬದುಕಿದ್ದರೂ ಸತ್ತಂತೆಯೇ. ಉದಾತ್ತಮನಸ್ಕರಾದ, ಭಾರತಮಾತೆಯ ಶ್ರೇಷ್ಠ ಪುತ್ರರಾದ ನಿಮ್ಮಂಥವರು, ಆಕೆಯು ಮೇಲೆದ್ದು ನಿಲ್ಲಲು ಬಹಳಷ್ಟು ನೆರವಾಗಬಲ್ಲಿರಿ, ತನ್ಮೂಲಕ ಶಾಶ್ವತ ಕೀರ್ತಿವಂತರಾಗಬಲ್ಲಿರಿ. ಅಜ್ಞಾನದಲ್ಲಿ ಮುಳುಗಿರುವ ಕೋಟ್ಯಾವಧಿ ದೀನ-ಆರ್ತ ಭಾರತೀಯರಿಗಾಗಿ ನಿನ್ನ ಆ ಉದಾತ್ತ ಹೃದಯವು ತೀವ್ರವಾಗಿ ಮಿಡಿಯಲಿ ಎಂದು ಪ್ರಾರ್ಥಿಸುವ,

— ವಿವೇಕಾನಂದ.''

ಮಹಾರಾಜರಲ್ಲಿ ಸ್ವಾಮೀಜಿಯವರು ಎಷ್ಟು ವಿಶ್ವಾಸ, ಭರವಸೆ ಹೊಂದಿದ್ದರು ಎನ್ನುವುದು ಮೇಲಿನ ಪತ್ರದಿಂದ ವ್ಯಕ್ತವಾಗುತ್ತದೆ. ಆದರೆ ದುರದೃಷ್ಟವಶಾತ್ ಮಹಾರಾಜರು ೨೮ ಡಿಸೆಂಬರ್ ೧೮೯೪ ರಲ್ಲಿ ವಿಧಿವಶರಾದರು. ವಿಷಾದದಿಂದ ಸ್ವಾಮೀಜಿ ತಮ್ಮ ಮತ್ತೋರ್ವ ಪ್ರಿಯ ಶಿಷ್ಯ ಅಳಸಿಂಗ ಪೆರುಮಾಳ್‌ಗೆ ಬರೆಯುತ್ತಾರೆ : ''ನಮ್ಮ ಆಧಾರಸ್ತಂಭ ಒಂದನ್ನು ಕಳೆದುಕೊಂಡಿದ್ದೇವೆ. ಮೈಸೂರು ಮಹಾರಾಜರು ಇನ್ನಿಲ್ಲ..''

ಸ್ವಾಮೀಜಿಯವರಿಗೆ ಮೈಸೂರಿನಲ್ಲಿ ರಾಮಕೃಷ್ಣ ಆಂದೋಳನ ಬೃಹತ್ತಾಗಿ ಬೆಳೆಯುವ ಭರವಸೆಯಿತ್ತು. ೩೧.೦೮.೧೮೯೪ರಂದು ಅಳಸಿಂಗ ಪೆರುಮಾಳರಿಗೆ ಅವರು ಬರೆಯುತ್ತಾರೆ, ''ಕಾಲಕ್ರಮೇಣ ಮೈಸೂರು ಒಂದು ಪ್ರಬಲ ಕೇಂದ್ರವಾಗಲಿದೆ.''

ಸ್ವಾಮೀಜಿಯವರ ಭವಿಷ್ಯವಾಣಿ ಸಾಕಾರವಾಗುತ್ತಿರುವುದನ್ನು ನಾವು ಈಗಾಗಲೇ ಕಾಣಬಹುದು. ಅಂದಿನ ಮೈಸೂರು ಪ್ರಾಂತ್ಯ, ಅಂದರೆ ಈಗಿನ ಕರ್ನಾಟಕದಾದ್ಯಂತ ರಾಮಕೃಷ್ಣ ಭಾವಧಾರೆಯ ತೀವ್ರ ಬೆಳವಣಿಗೆಯನ್ನು ಗಮನಿಸಬಹುದು.

ಪರಿವ್ರಾಜಕ ಸಂನ್ಯಾಸಿಯಾಗಿ ವಿವೇಕಾನಂದರು ಸುಂಟರ ಗಾಳಿಯಂತೆ ದೇಶದ ವಿವಿಧ ಭಾಗಗಳಲ್ಲಿ ಸಂಚರಿಸಿದರು. ಅವರು ಸಂಚರಿಸಿದ ಪ್ರದೇಶಗಳಲ್ಲೆಲ್ಲ ಭಗವಾನ್ ರಾಮಕೃಷ್ಣರ ಆದರ್ಶ ವಿಚಾರಗಳ ಪ್ರಚಾರವಾಯಿತು. ಹೆಚ್ಚು ಹೆಚ್ಚು ಜನರು ದಿವ್ಯ ತ್ರಯರ ಕೃಪಾವಲಯಕ್ಕೆ ಸೇರತೊಡಗಿದರು. ಕ್ರಮೇಣ ಬೇಲೂರು ಮಠದ ಶಾಖೆಗಳು ಪ್ರಾರಂಭವಾದವು. ಕರ್ನಾಟಕದಲ್ಲಿ ಸ್ವಾಮೀಜಿಯವರ ಆಗಮನದಿಂದ ಪುನೀತವಾದ ಬೆಂಗಳೂರು, ಮೈಸೂರು, ಬೆಳಗಾವಿಗಳು ರಾಮಕೃಷ್ಣ ಭಾವಪ್ರಚಾರದ ಪ್ರಮುಖ ಕೇಂದ್ರಗಳಾಗಿ ಬೆಳೆದಿವೆ. ಅವರು ತಂಗಿದ್ದ ತಾಣಗಳಲ್ಲಿ ಭವ್ಯ ಸ್ಮಾರಕಗಳ ನಿರ್ಮಾಣವಾಗಿವೆ, ಆಗುತ್ತಿವೆ.

### ಕರ್ನಾಟಕದಲ್ಲಿ ಶಾಖಾಕೇಂದ್ರಗಳು

ಬೆಂಗಳೂರಿನ ಬಸವನಗುಡಿಯಲ್ಲಿರುವ ರಾಮಕೃಷ್ಣ ಮಠವು ಅನೇಕ ಕಾರಣಗಳಿಂದ ಒಂದು ಪುಣ್ಯಸ್ಥಳವಾಗಿದೆ. ಸ್ವತಃ ಶ್ರೀಮಾತೆಯವರು ಬಂದು ಕೃಪೆಗೈದ ತಾಣವಿದು. ಮಾರ್ಚ್ ೧೯೧೧ರಲ್ಲಿ ಶ್ರೀಮಾತೆಯವರು ಆಶ್ರಮಕ್ಕೆ ಭೇಟಿ ನೀಡಿದರು. ಬೆಂಗಳೂರಿನಲ್ಲಿ ರಾಮಕೃಷ್ಣ ಆಶ್ರಮ ೧೯೦೪ರಲ್ಲಿ ಸ್ವಾಮಿ ರಾಮಕೃಷ್ಣಾನಂದರಿಂದ ಪ್ರಾರಂಭವಾಯಿತು. ಸ್ವಂತ ಕಟ್ಟಡದ ಶಿಲಾನ್ಯಾಸವನ್ನು ೧೯೦೬ರಲ್ಲಿ ಸ್ವಾಮಿ ಅಭೇದಾನಂದರು ನೆರವೇರಿಸಿದ್ದು, ೨೦.೦೧.೧೯೦೯ರಂದು ಹೊಸ ಮಂದಿರವನ್ನು ಸ್ವಾಮಿ ಬ್ರಹ್ಮಾನಂದರು ಉದ್ಘಾಟಿಸಿದರು.

ಬೆಂಗಳೂರಿನ ಹಲಸೂರಿನಲ್ಲಿ ೧೯೦೭ರಲ್ಲಿ ಕೆಲವು ಭಕ್ತರು ಸೇರಿ ಒಂದು ಆಶ್ರಮವನ್ನು ಆರಂಭ ಮಾಡಿದರು. ೧೯೪೪ರಲ್ಲಿ ಅದು ಬೇಲೂರು ಮಠದ ಆಡಳಿತಕ್ಕೆ ಒಳಪಟ್ಟಿತು. ಅನೇಕ ಸೇವಾ ಕಾರ್ಯಗಳಲ್ಲದೆ, ವಿಶ್ರಾಂತ ಯತಿಗಳಿಗೆ ಆಶ್ರಯತಾಣವಾಗಿಯೂ ಅದು ಸೇವೆ ಸಲ್ಲಿಸುತ್ತಿದೆ. ಆಸಕ್ತರು ಹಿರಿಯ ಯತಿಗಳ ಅನುಭವದ ಲಾಭ ಪಡೆಯಲು ಇಲ್ಲಿಗೆ ಬರುತ್ತಿರುತ್ತಾರೆ.

ಬೇಲೂರು ಮಠದ ಶಾಖೆಗಳಲ್ಲಿ ಮೈಸೂರು ಆಶ್ರಮವು ಒಂದು ಪ್ರಮುಖ ಕೇಂದ್ರ. ೧೯೨೫ರಲ್ಲಿ ಪ್ರಾರಂಭಗೊಂಡು, ಸದ್ಯದಲ್ಲೇ ನೂರು ವರ್ಷಗಳನ್ನು ಪೂರೈಸಲಿದೆ. ವಿಸ್ತಾರವಾದ ಜಾಗದಲ್ಲಿ, ಈಗಿರುವ ಮಂದಿರ ಸ್ಥಾಪನೆಯಾಗಿದ್ದು ೧೯೫೦ರಲ್ಲಿ. ೬೯ ಎಕರೆ ವಿಸ್ತೀರ್ಣದ, ವಿಶಾಲ, ನಿಸರ್ಗ-ರಮಣೀಯ ಪರಿಸರದಲ್ಲಿ ರಾಮಕೃಷ್ಣ ವಿದ್ಯಾಶಾಲೆ, ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆ (ಮೊದಲ ಹೆಸರು ವೇದಾಂತ ಕಾಲೇಜ್) ಕಾರ್ಯನಿರ್ವಹಿಸುತ್ತಿವೆ. ಮೈಸೂರು ಪ್ರಧಾನವಾಗಿ ಪುಸ್ತಕ ಪ್ರಕಾಶನ ಕೇಂದ್ರವಾಗಿದ್ದು, ಇಲ್ಲಿ 'ವಿವೇಕಪ್ರಭ' ಎಂಬ ಕನ್ನಡ ಮಾಸಪತ್ರಿಕೆ ೨೦೦೦ದಲ್ಲಿ ಆರಂಭವಾಯಿತು.

ಸ್ವಾಮಿ ವಿವೇಕಾನಂದರ ಪಾದಸ್ಪರ್ಶದಿಂದ ಪುನೀತವಾದ ನಗರ ಬೆಳಗಾವಿಯಲ್ಲಿ ಭಗವಾನ್ ಶ್ರೀ ರಾಮಕೃಷ್ಣರ ವಿಶಾಲವಾದ, ಭವ್ಯ ಮಂದಿರ ೨೦೦೦ನೇ ಇಸವಿಯಲ್ಲಿ ಪ್ರಾರಂಭವಾಯಿತು. ಹರಿಪದ ಮಿತ್ರನ ಮನೆ, ಸ್ವಾಮೀಜಿ ತಂಗಿದ್ದ ಭಾಟೆ ಹೌಸ್ ಇಲ್ಲಿನ ಪ್ರಧಾನ ಸ್ಥಳಗಳು. ಮೂರು ತಿಂಗಳಿಗೊಮ್ಮೆ ಆಯೋಜಿಸಲಾಗುವ 'ಜಪ ಯಜ್ಞ' ಎಂಬ ೫ ದಿನದ ಆವಾಸಿ ಶಿಬಿರ ಇಲ್ಲಿನ ಒಂದು ವಿನೂತನ ಆಧ್ಯಾತ್ಮಿಕ ಚಟುವಟಿಕೆ.

ಈಗ ಕರ್ನಾಟಕದಲ್ಲಿ ಮಂಗಳೂರು, ಪೊನ್ನಂಪೇಟೆ, ದಾವಣಗೆರೆ, ಮಾದಿಹಳ್ಳಿ, ಶಿವನಹಳ್ಳಿ, ವೆಂಕಟಾಪುರ (ಪಾವಗಡ) ಸೇರಿ ಬೇಲೂರು ಮಠದ ಹತ್ತು ಶಾಖೆಗಳಿವೆ.

ಇವಲ್ಲದೆ, ಸ್ವಾಮಿ ವಿವೇಕಾನಂದರ ವಿಚಾರಗಳಿಂದ ಪ್ರೇರಿತರಾಗಿ ಅನೇಕ ಯುವಕ ಯುವತಿಯರು ಸಂನ್ಯಾಸ ಸ್ವೀಕರಿಸಿ, ತ್ಯಾಗ ಜೀವನಕ್ಕೆ ತಮ್ಮನ್ನು ಸಮರ್ಪಿಸಿಕೊಂಡಿದ್ದಾರೆ. ಅಲ್ಲಲ್ಲಿ ದಿವ್ಯ ತ್ರಯರ ಹೆಸರಿನಲ್ಲಿ ಆಶ್ರಮಗಳನ್ನು ತೆರೆದು ಸೇವಾ ಕಾರ್ಯದಲ್ಲಿ ನಿರತರಾಗಿದ್ದಾರೆ. ಕರ್ನಾಟಕದಾದ್ಯಂತ, ಪ್ರತಿ ಜಿಲ್ಲೆಯಲ್ಲೂ ಎನ್ನುವಂತೆ ಇಂತಹ ಸಾಧುಗಳು, ಸಾಧ್ವಿಗಳು ನಡೆಸುತ್ತಿರುವ ಆಶ್ರಮಗಳನ್ನು ಕಾಣಬಹುದು. ಇವೆಲ್ಲವೂ ವಿವೇಕಾನಂದರ ಆದರ್ಶಗಳಿಗೆ ಬದ್ಧವಾಗಿ, 'ರಾಮಕೃಷ್ಣ ಭಾವಪ್ರಚಾರ ಪರಿಷತ್' ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿವೆ. ಈ ಎಲ್ಲ ಆಶ್ರಮಗಳು, ಮಠಗಳು ದೈನಂದಿನ ಪೂಜೆ, ಭಜನೆ ಇತ್ಯಾದಿ ಕೈಂಕರ್ಯ, ಸೇವಾಕಾರ್ಯಗಳ ಜೊತೆಗೆ ವ್ಯಕ್ತಿತ್ವ ವಿಕಸನ, ಮೌಲ್ಯಶಿಕ್ಷಣ ಹಾಗೂ ಆಧ್ಯಾತ್ಮಿಕ ಬೆಳವಣಿಗೆಗೆ ಉತ್ತೇಜನ, ಮಾರ್ಗದರ್ಶನಗಳನ್ನು ನೀಡುತ್ತಿವೆ. ಸಹಸ್ರ ಸಹಸ್ರ ಸಂಖ್ಯೆಯ ಸಾಧಕರ ಆಧ್ಯಾತ್ಮಿಕ ಜೀವನಕ್ಕೆ ಸಹಕಾರಿಯಾಗಿವೆ. ಸ್ವಾಮಿ ವಿವೇಕಾನಂದರು ಅಂದು ಹರಿಸಿದ ಅಪೂರ್ವ ಆಧ್ಯಾತ್ಮಿಕ ತರಂಗಗಳ ಪ್ರಭಾವದಿಂದ ಆಕರ್ಷಿತರಾಗಿ ಈಗಲೂ ಸಾವಿರಾರು ಕುಟುಂಬಗಳು ಆಶ್ರಮಗಳ ನಿಕಟ ಸಂಪರ್ಕಕ್ಕೆ ಬಂದು ಭಗವಾನ್ ಶ್ರೀರಾಮಕೃಷ್ಣರ ದಿವ್ಯಕೃಪಾವಲಯದಲ್ಲಿ ಆಸರೆಯನ್ನು ಕಂಡುಕೊಳ್ಳುತ್ತಿವೆ. ❀

### ಶ್ರೀರಾಮಕೃಷ್ಣರ ಅವತಾರ ಮಹಿಮೆ

''ಸ್ವಯಂ ಸ್ವಾಮೀಜಿಯೇ ಠಾಕೂರರ ನಿರ್ದೇಶನದಂತೆ ಈ ಸಂಘದ ಸಂಘಟನೆ ಮಾಡಿದ್ದಾರೆ. ಅವರ ಉದಾರ ಧರ್ಮ ಭಾವಗಳನ್ನು ಸಮಗ್ರ ಜಗತ್ತಿನಲ್ಲಿ ಪ್ರಚಾರ ಮಾಡುವ ಕರ್ತವ್ಯಭಾರವನ್ನು ಈ ಸಂಘದ ಮೇಲೆ ಹೊರಿಸಿದ್ದಾರೆ..

''ಶ್ರೀಗುರು ಸರ್ವರಿಗೂ ಕೃಪೆ ಮಾಡಿಯೇ ಮಾಡುತ್ತಾನೆ. ಪಾಪಿಯೋ ತಾಪಿಯೋ ಯಾರೂ ಆತನ ಕೃಪೆಯಿಂದ ವಂಚಿತರಾಗುವುದಿಲ್ಲ.. ಆತನ ಪ್ರೇಮಪ್ರವಾಹ ಅತ್ಯಂತ ನೀಚನಾದ ಚಂಡಾಲನವರೆಗೂ ಅಪ್ರತಿಹತವಾಗಿ ಹರಿಯುತ್ತದೆ, ಆತನು ಎಲ್ಲರನ್ನೂ ಕ್ಷಮಿಸುತ್ತಾನೆ. ಚಂಡಾಲರಿಗೂ ಕೃಪೆದೋರುವ ಸಲುವಾಗಿಯೇ ಆತನು ಶ್ರೀರಾಮಕೃಷ್ಣ ದೇಹಧಾರಣೆ ಮಾಡಿ ಬಂದದ್ದು.. ಆ ಪರಬ್ರಹ್ಮನೇ ಇಂದು ರಾಮಕೃಷ್ಣರೂಪದಲ್ಲಿ ಬಂದಿದ್ದಾನೆ.''

— ಸ್ವಾಮಿ ಶಿವಾನಂದ